6. ಅಧಿನಿಯಮದ ಪರಿಚ್ಛೇದ 185ರಲ್ಲಿ ಉಲ್ಲೇಖಿಸಲಾಗಿರುವ ನಿರ್ದೇಶಕರುಗಳಿಗೆ ಮತ್ತು/ಅಥವಾ ವ್ಯಕ್ತಿಗಳಿಗೆ ಅಥವಾ ಸಂಸ್ಥೆಗಳಿಗೆ ಅಥವಾ ಕಂಪನಿಗಳಿಗೆ ಯಾವುದೇ ಮುಂಗಡಗಳನ್ನು/ಸಾಲಗಳನ್ನು ನೀಡಿರುವುದಿಲ್ಲ;

7. ಅಧಿನಿಯಮದ ಪರಿಚ್ಛೇದ 188ರಲ್ಲಿ ನಿರ್ದಿಷ್ಟಪಡಿಸಲಾಗಿರುವ ಸಂಬಂಧಿತ ತಂಡಗಳ ಜೊತೆ ಯಾವುದೇ ಗುತ್ತಿಗೆಗಳು/ಒಡಂಬಡಿಕೆಗಳನ್ನೂ ಮಾಡಿಕೊಂಡಿರುವುದಿಲ್ಲ;

8. ಭದ್ರತೆಗಳು/ಆಧ್ಯತೆಯ ಷೇರುಗಳು ಅಥವಾ ಡಿಬೆಂಚರುಗಳ ನೀಡಿಕೆ ಅಥವಾ ಹಂಚಿಕೆ ಅಥವಾ ವರ್ಗಾವಣೆ ಅಥವಾ ಸಾಗಣೆ ಅಥವಾ ಹಿಂದಕ್ಕೆ ಖರೀದಿರುವ/ಆಧ್ಯತೆಯ ಷೇರುಗಳನ್ನು ಅಥವಾ ಡಿಬೆಂಚರುಗಳನ್ನು ಕೊಂಡುಕೊಳ್ಳುವಿಕೆ ಅಥವಾ ಷೇರು ಬಂಡವಾಳದ ಬದಲಾವಣೆ ಅಥವಾ ಇಳಿಕೆ/ಷೇರುಗಳು/ಭದ್ರತೆಗಳ ಪರಿವರ್ತನೆಗಳು ಇರಲಿಲ್ಲ.

9. ಷೇರು ಲಾಭಾಂಶದ ಷೇರುಗಳ ಹಕ್ಕುಗಳು ಅಥವಾ ಬೋನಸ್ಸು ಷೇರುಗಳ ಹಕ್ಕುಗಳನ್ನು ಅಮಾನತ್ತಿನಲ್ಲಿಟ್ಟಿರುವ ಯಾವುದೇ ದೃಷ್ಟಾಂತಗಳೂ ಇರಲಿಲ್ಲ ಮತ್ತು ಅಧಿನಿಯಮದ ಅನುವುಗಳ ಅನುಸರಣೆಯಂತೆ ಷೇರುಗಳ ನೋಂದಣಿ ಅಥವಾ ವರ್ಗಾವಣೆಯು ಬಾಕಿಯಿರುವ ದೃಷ್ಟಾಂತಗಳಿರಲಿಲ್ಲ.

10. ಅಂತಿಮ ಷೇರು ಲಾಭಾಂಶದ ಘೋಷಣೆ ಮತ್ತು ಪಾವತಿ.

11. ಅಧಿನಿಯಮದ ಪರಿಚ್ಛೇದ 134ರ ಅನುವುಗಳ ಅನುಸಾರ ಲೆಕ್ಕಪರಿಶೋಧನೆಗೆ ಒಳಪಟ್ಟ ಹಣಕಾಸು ತ:ಖ್ತೆಗಳಿಗೆ ಸಹಿ ಮಾಡುವುದು ಹಾಗೂ ಉಪ–ಪರಿಚ್ಛೇದಗಳು (3),(4), (5)ರ ಅನುಸಾರ ನಿರ್ದೇಶಕರುಗಳ ವರದಿ;

12. ನಿರ್ದೇಶಕರುಗಳ ಮಂಡಳಿಯ ರಚನೆ, ನಿರ್ದೇಶಕರುಗಳ ನೇಮಕ/ನಿವೃತ್ತಿ.

13. ಅಧಿನಿಯಮದ ಪರಿಚ್ಛೇದ 139ರ ಅನುವುಗಳ ಅನುಸಾರ ಲೆಕ್ಕಪರಿಶೋಧಕರುಗಳ ನೇಮಕ;

14. ಕಂಪನಿಯು ಈ ಕೆಳಗೆ ವಿವರಿಸಿರುವಂತೆ ಕಂಪನಿಗಳ ಅಧಿನಿಯಮ, 2013ರ ಅನುವುಗಳ ಅಡಿಯಲ್ಲಿ ನಿರ್ದಿಷ್ಟಪಡಿಸಿರುವಂತೆ ಕಂಪನಿಗಳ ರಿಜಿಸ್ಟ್ರಾರ್, ಕರ್ನಾಟಕ, ಬೆಂಗಳೂರು, ಇವರಿಂದ ಅಗತ್ಯ ಅನುಮತಿಗಳನ್ನು ಪಡೆದುಕೊಂಡಿರುವುದು.

(i) ಅಧಿನಿಯಮದ ಪರಿಚ್ಛೇದ 129ರ ಜೊತೆಯಲ್ಲಿ ಓದಲ್ಪಡುವ ಪರಿಚ್ಛೇದ 96ರ ಅಡಿಯಲ್ಲಿ 31 ಮಾರ್ಚ್ 2017ಕ್ಕೆ ಅಂತ್ಯಗೊಂಡ ಹಣಕಾಸು ಸಾಲಿಗೆ ಕಂಪನಿಯ ವಾರ್ಷಿಕ ಸರ್ವಸದಸ್ಯರ ಸಭೆಯನ್ನು ನಡೆಸಲು ಕಾಲಾವಧಿಯ ವಿಸ್ತರಣೆ;

15. ಯಾವುದೇ ಠೇವಣಿಗಳನ್ನೂ ಸ್ವೀಕರಿಸಿರುವುದಿಲ್ಲ.

16. ಅಧಿನಿಯಮದ ಪರಿಚ್ಛೇದ 186ರ ಅನುವುಗಳ ಅಡಿಯಲ್ಲಿ ಬರುವಂತೆ ತನ್ನ ನಿರ್ದೇಶಕರುಗಳು, ಸದಸ್ಯರುಗಳು, ಸಾರ್ವಜನಿಕ ಹಣಕಾಸು ಸಂಸ್ಥೆಗಳು, ಬ್ಯಾಂಕುಗಳು ಮತ್ತು ಇತರರುಗಳಿಂದ ಯಾವುದೇ ಸಾಲಗಳನ್ನೂ ಪಡೆದಿರುವುದಿಲ್ಲ;

17. ಅಧಿನಿಯಮದ ಪರಿಚ್ಛೇದ 186ರ ಅನುವುಗಳ ಅಡಿಯಲ್ಲಿ ಬರುವಂತೆ ಇತರೆ ಸಾಂಸ್ಥಿಕ ಸಂಸ್ಥೆಗಳಿಗೆ, ಸಂಸ್ಥೆಗಳಿಗೆ ಅಥವಾ ವ್ಯಕ್ತಿಗಳಿಗೆ ಯಾವುದೇ ಸಾಲಗಳನ್ನೂ ನೀಡಿರುವುದಿಲ್ಲ ಮತ್ತು ಹೂಡಿಕೆಗಳನ್ನು ಮಾಡಿರುವುದಿಲ್ಲ ಅಥವಾ ಖಾತರಿಗಳನ್ನು ನೀಡಿರುವುದಿಲ್ಲ ಅಥವಾ ಭದ್ರತೆಗಳನ್ನು ಒದಗಿಸಿರುವುದಿಲ್ಲ.

18. ಕಂಪನಿಯ ನಿಯಮ–ಉಪನಿಯಮಗಳ ಅನುವುಗಳಿಗೆ ಯಾವುದೇ ಬದಲಾವಣೆ/ ಮಾರ್ಪಾಡುಗಳನ್ನು ಮಾಡಿರುವುದಿಲ್ಲ.

ಶಶಿಧರ ಜಿ.ಎಸ್ ಅಂಡ್ ಕಂಪನಿಗಾಗಿ
ಕಂಪನಿ ಕಾರ್ಯದರ್ಶಿಗಳು

–ಸಹಿ ಮಾಡಲಾಗಿದೆ–
(ಸಿಎಸ್ ಶಶಿಧರ ಜಿ.ಎಸ್.)
ಮಾಲೀಕರು
ಕಾರ್ಯನಿರತವಾಗಿರುವುದಕ್ಕಾಗಿನ ಪ್ರಮಾಣಪತ್ರದ ಸಂಖ್ಯೆ:2878

ಸ್ಥಳ: ಬೆಂಗಳೂರು
ದಿನಾಂಕ:29.10.2018

ಅನುಬಂಧ–ಎ

2017–18 ಹಣಕಾಸು ಸಾಲಿನಲ್ಲಿ ಮೆ. ಜಂಗಲ್ ಲಾಡ್ಜಸ್ ಅಂಡ್ ರೆಸಾರ್ಟ್ಸ್ ಲಿಮಿಟೆಡ್ ಕಂಪನಿಗಳ ರಿಜಿಸ್ಟ್ರಾರ್‌ರವರು, ಕರ್ನಾಟಕ, ಬೆಂಗಳೂರು, ಇವರಲ್ಲಿ ಸಲ್ಲಿಸಿದ ನಮೂನೆಗಳು ಮತ್ತು ಸಲ್ಲಿಕೆಗಳು.

ಕ್ರಮ ಸಂಖ್ಯೆ	ನಮೂನೆ/ ಸಲ್ಲಿಕೆ	ಯಾವ ಪರಿಚ್ಛೇದದ ಆಡಿಯಲ್ಲಿ ಸಲ್ಲಿಸಲಾಗಿದ್ದಿತು	ವಿವರ	ಸಲ್ಲಿಕೆಗಾಗಿ ನಿಗಧಿತ ದಿನಾಂಕ	ಸಲ್ಲಿಸಲಾದ ದಿನಾಂಕ	ಎಸ್‌ಆರ್‌ಎನ್	ನಿರ್ದಿಷ್ಟ ಸಮಯದ ಒಳಗೆ ಸಲ್ಲಿಸಲಾಗಿದ್ದಿತೆ
01	**02**	**03**	**04**	**05**	**06**	**07**	**08**
01	ನಮೂನೆ ಪಿಎಎಸ್–03	ಕಂಪನಿಗಳ ಅಧಿನಿಯಮ, 2013ರ ಪರಿಚ್ಛೇದ 62	ಷೇರುಗಳ ಹಂಚಿಕೆ ದಿನಾಂಕ 31.03.2017	30.04.17	21.04.17	ಜಿ41550633	ಹೌದು
02	02 ನಮೂನೆ ಡಿಐಆರ್–12	ಕಂಪನಿಗಳ ಅಧಿನಿಯಮ, 2013ರ ಪರಿಚ್ಛೇದ 161	ನಿರ್ದೇಶಕರ ನೇಮಕ ದಿನಾಂಕ 31.03.2017	30.04.17	24.07.17	ಜಿ.48940688	ಇಲ್ಲ
03	ನಮೂನೆ–ಜಿಎನ್‌ಎಲ್–1	ಕಂಪನಿಗಳ ಅಧಿನಿಯಮ, 2013ರ ಪರಿಚ್ಛೇದ 96	2016–17 ಹಣಕಾಸು ಸಾಲಿಗೆ ವಾರ್ಷಿಕ ಸರ್ವಸದಸ್ಯರ ಸಭೆಯನ್ನು ಮುಂದೂಡುವ ಸಲುವಾಗಿ ಅರ್ಜಿ	ಅನ್ವಯಗೊಳ್ಳುವುದಿಲ್ಲ	21.09.17	ಜಿ53594511	ಹೌದು
04	ನಮೂನೆ–ಡಿಐಆರ್–12	ಕಂಪನಿಗಳ ಅಧಿನಿಯಮ, 2013ರ ಪರಿಚ್ಛೇದ 168	ನಿರ್ದೇಶಕರುಗಳ ನೇಮಕ ಮತ್ತು ರಾಜೀನಾಮೆ ದಿನಾಂಕ 28.07.2017	26.08.17	13.12.17	ಜಿ69835965	
05	ನಮೂನೆ–ಎಒಸಿ–4	ಕಂಪನಿಗಳ ಅಧಿನಿಯಮ, 2013ರ ಪರಿಚ್ಛೇದ 161 ಮತ್ತು 137	31.03.2017ಕ್ಕೆ ಅಂತ್ಯಗೊಂಡ ಹಣಕಾಸು ಸಾಲಿಗೆ ಹಣಕಾಸು ತ:ಖ್ತೆಗಳು	27.01.18	08.01.18	ಜಿ72938632	ಇಲ್ಲ
06	ನಮೂನೆ–ಎಂಜಿಟಿ–7	ಕಂಪನಿಗಳ ಅಧಿನಿಯಮ, 2013ರ ಪರಿಚ್ಛೇದ 92(1)	29.12.2017ರಂದು ನಡೆದ ವಾರ್ಷಿಕ ಸರ್ವಸದಸ್ಯರ ಸಭೆ (ವಾರ್ಷಿಕ ಸಲ್ಲಿಕೆ)	26.12.18	08.01.18	ಜಿ72939572	ಹೌದು

ಕ್ರಮ ಸಂಖ್ಯೆ	ನಮೂನೆ/ ಸಲ್ಲಿಕೆ	ಯಾವ ಪರಿಚ್ಛೇದದ ಆಡಿಯಲ್ಲಿ ಸಲ್ಲಿಸಲಾಗಿದ್ದಿತು	ವಿವರ	ಸಲ್ಲಿಕೆಗಾಗಿ ನಿಗಧಿತ ದಿನಾಂಕ	ಸಲ್ಲಿಸಲಾದ ದಿನಾಂಕ	ಎಸ್‌ಆರ್‌ಎನ್	ನಿರ್ದಿಷ್ಟ ಸಮಯದ ಒಳಗೆ ಸಲ್ಲಿಸಲಾಗಿದ್ದಿತೆ
01	**02**	**03**	**04**	**05**	**06**	**07**	**08**
07	ನಮೂನೆ–ಎಡಿಟಿ–01	ಕಂಪನಿಗಳ ಅಧಿನಿಯಮ, 2013ರ ಪರಿಚ್ಛೇದ 139(1)	ಶಾಸನಬದ್ಧ ಲೆಕ್ಕಪರಿಶೋಧಕರ ನೇಮಕ	12.01.18	08.01.18	ಜಿ72942055	ಹೌದು

ಶಶಿಧರ ಜಿ.ಎಸ್ ಅಂಡ್ ಕಂಪನಿಗಾಗಿ
ಕಂಪನಿ ಕಾರ್ಯದರ್ಶಿಗಳು

––ಸಹಿಮಾಡಲಾಗಿದೆ–––
(ಸಿಎಸ್ ಶಶಿಧರ ಜಿ.ಎಸ್.)
ಮಾಲೀಕರು
ಕಾರ್ಯನಿರತವಾಗಿರುವುದಕ್ಕಾಗಿನ ಪ್ರಮಾಣಪತ್ರದ ಸಂಖ್ಯೆ: 2878

ಸ್ಥಳ: ಬೆಂಗಳೂರು
ದಿನಾಂಕ:29.10.2018

ಜಂಗಲ್ ಲಾಡ್ಜಸ್ ಅಂಡ್ ರೆಸಾರ್ಟ್ಸ್ ಲಿಮಿಟೆಡ್, ಇದರ ಸದಸ್ಯರಿಗೆ ಸ್ವತಂತ್ರ ಲೆಕ್ಕಪರಿಶೋಧಕರ ವರದಿ

1. ಹಣಕಾಸು ತ:ಖ್ತೆಗಳ ಮೇಲಿನ ವರದಿ

31 ಮಾರ್ಚ್ 2018ರಲ್ಲಿದ್ದಂತೆ ಆಸ್ತಿ–ಜವಾಬ್ದಾರಿ ತ:ಖ್ತೆ, ಆ ದಿನಾಂಕಕ್ಕೆ ಅಂತ್ಯಗೊಂಡ ಪ್ರಸಕ್ತ ಸಾಲಿನ ಲಾಭ ಮತ್ತು ನಷ್ಟ ತ:ಖ್ತೆ ಮತ್ತು ಹಣಕಾಸು ಹರಿವಿನ ತ:ಖ್ತೆ ಹಾಗೂ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಗಮನಾರ್ಹ ಧೋರಣೆಗಳು ಹಾಗೂ ಅದಕ್ಕೆ ಲಗತ್ತಿಸಲಾಗಿರುವ ವಿವರಣಾತ್ಮಕ ಮಾಹಿತಿಯ ಸಂಕ್ಷಿಪ್ತ ವರದಿಯನ್ನು ಒಳಗೊಂಡಂತೆ ಜಂಗಲ್ ಲಾಡ್ಜಸ್ ಅಂಡ್ ರೆಸಾರ್ಟ್ಸ್‌ನ (ಕಂಪನಿ) ಈ ವರದಿಗೆ ಲಗತ್ತಿಸಲಾಗಿರುವ ಹಣಕಾಸು ತ:ಖ್ತೆಗಳನ್ನು ನಾವು ಲೆಕ್ಕಪರಿಶೋಧನೆ ಮಾಡಿರುವೆವು.

2. ಹಣಕಾಸು ತ:ಖ್ತೆಗಳ ತಯಾರಿಕೆಗೆ ಸಂಬಂಧಿಸಿದಂತೆ ವ್ಯವಸ್ಥಾಪನೆಯ ಜವಾಬ್ದಾರಿ

ಕಂಪನಿಗಳ (ಲೆಕ್ಕಪತ್ರಗಳು) ನಿಯಮಗಳು, 2014ರ ನಿಯಮ 7ರ ಜೊತೆಯಲ್ಲಿ ಓದಲ್ಪಡುವ ಅಧಿನಿಯಮದ 133ನೇ ಪರಿಚ್ಛೇದದಲ್ಲಿ ನಿರ್ದಿಷ್ಟಪಡಿಸಲಾಗಿರುವ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಮಾನದಂಡಗಳು ಒಳಗೊಂಡಂತೆ ಭಾರತದಲ್ಲಿ ಸರ್ವೇಸಾಮಾನ್ಯವಾಗಿ ಒಪ್ಪಿಕೊಳ್ಳಲಾಗಿರುವ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ತತ್ವಗಳ ಅನುಸಾರ ಕಂಪನಿಯ ಹಣಕಾಸಿನ ಸ್ಥಿತಿಗತಿಗಳ, ಹಣಕಾಸಿನ ನಿರ್ವಹಣೆ ಹಾಗೂ ಹಣಕಾಸಿನ ಹರಿವಿನ ಬಗ್ಗೆ ಒಂದು ಸತ್ಯಾಸತ್ಯತೆಯಿಂದ ಕೂಡಿದ ಹಾಗೂ ನ್ಯಾಯಸಮ್ಮತ ಅಭಿಪ್ರಾಯವನ್ನು ನೀಡುವಂತಹ ಈ ಹಣಕಾಸು ತ:ಖ್ತೆಗಳನ್ನು ತಯಾರಿಸುವುದಕ್ಕೆ ಸಂಬಂಧಿಸಿದಂತೆ ಕಂಪನಿಗಳ ಅಧಿನಿಯಮ, 2013ರ ಪರಿಚ್ಛೇದ 134 (5)ರಲ್ಲಿ ಉಲ್ಲೇಖಿಸಲಾಗಿರುವ ವಿಷಯಗಳಿಗೆ ಸಂಬಂಧಿಸಿದಂತೆ ಕಂಪನಿಯ ನಿರ್ದೇಶಕರುಗಳ ಮಂಡಳಿಯು ಜವಾಬ್ದಾರಿಯುತವಾಗಿರುತ್ತದೆ. ಈ ಜವಾಬ್ದಾರಿಯು ಅಧಿನಿಯಮದ ಅನುವುಗಳ ಅನುಸಾರ ಕಂಪನಿಯ ಆಸ್ತಿಗಳ ಸಂರಕ್ಷಣೆಗಾಗಿ ಹಾಗೂ ವಂಚನೆಗಳು ಮತ್ತು ಇತರೆ ನಿಯಮಬಾಹಿರತೆಗಳನ್ನು ತಡೆಯುವ ಸಲುವಾಗಿ ಸೂಕ್ತ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಕಾರ್ಯನೀತಿಗಳನ್ನು ಆಯ್ಕೆ ಮಾಡುವುದು ಹಾಗೂ ಅನ್ವಯಗೊಳಿಸುವುದು, ಲೆಕ್ಕಪತ್ರಗಳ ದಾಖಲೆಗಳ ಯಾಥಾರ್ಥತೆ ಮತ್ತು ಪರಿಪೂರ್ಣತೆಯನ್ನು ಖಚಿತಪಡಿಸಿಕೊಳ್ಳಲು ನ್ಯಾಯಸಮ್ಮತವಾದ ಹಾಗೂ ವಿವೇಚನೆಯಿಂದ ಕೂಡಿದ ತೀರ್ಮಾನಗಳನ್ನು ತೆಗೆದುಕೊಳ್ಳುವುದು ಮತ್ತು ಅಂದಾಜುಗಳನ್ನು ಮಾಡುವುದು, ಒಂದು ಸತ್ಯಾಸತ್ಯತೆಯಿಂದ ಹಾಗೂ ನ್ಯಾಯಸಮ್ಮತತೆಯಿಂದ ಕೂಡಿದ, ತಪ್ಪು ಹೇಳಿಕೆಗಳಿಂದ ಹೊರತಾದ ಹಣಕಾಸಿನ ತ:ಖ್ತೆಗಳನ್ನು ತಯಾರಿಸುವ ಹಾಗೂ ಮಂಡಿಸುವುದಕ್ಕೆ ಸೂಕ್ತವಾದಂತಹ ಸಮರ್ಪಕ ಆಂತರಿಕ ಹಣಕಾಸು ನಿಯಂತ್ರಣಗಳನ್ನು ರೂಪಿಸುವುದು, ಕಾರ್ಯಗತಗೊಳಿಸುವುದು ಹಾಗೂ ನಿರ್ವಹಿಸುವುದನ್ನು ಕೂಡ ಒಳಗೊಂಡಿರುತ್ತದೆ.

3. ಲೆಕ್ಕಪರಿಶೋಧಕರ ಜವಾಬ್ದಾರಿ:

ನಮ್ಮ ಲೆಕ್ಕಪರಿಶೋಧನೆಯ ಆಧಾರದ ಮೇರೆಗೆ ಈ ಹಣಕಾಸು ತ:ಖ್ತೆಗಳ ಮೇಲೆ ಒಂದು ಅಭಿಪ್ರಾಯವನ್ನು ವ್ಯಕ್ತಪಡಿಸುವುದು ನಮ್ಮ ಜವಾಬ್ದಾರಿಯಾಗಿರುತ್ತದೆ. ನಾವು ಅಧಿನಿಯಮ ಹಾಗೂ ಅವುಗಳ ಅಡಿಯಲ್ಲಿನ ನಿಯಮಗಳ ಅನುವುಗಳ ಅಡಿಯಲ್ಲಿ ಲೆಕ್ಕಪರಿಶೋಧನಾ ವರದಿಯಲ್ಲಿ ಸೇರಿಸಲು ಅಗತ್ಯವಿರುವ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಮತ್ತು ಲೆಕ್ಕಪರಿಶೋಧನಾ ಸಂಬಂಧಿತ ಮಾನದಂಡಗಳು ಮತ್ತು ವಿಷಯಕಗಳನ್ನು ಗಣನೆಗೆ ತೆಗೆದುಕೊಂಡಿರುವೆವು.

ನಾವು, ಅಧಿನಿಯಮದ ಪರಿಚ್ಛೇದ 143 (10)ರ ಅಡಿಯಲ್ಲಿ ನಿರ್ದಿಷ್ಟಪಡಿಸಲಾಗಿರುವ ಲೆಕ್ಕಪರಿಶೋಧನೆಯ ಮೇಲಿನ ಮಾನದಂಡಗಳ ಅನುಸಾರ ಲೆಕ್ಕಪರಿಶೋಧನೆಯನ್ನು ನಡೆಸಿರುವೆವು. ನೈತಿಕ ಅಗತ್ಯತೆಗಳನ್ನು ಪೂರೈಸಿದಂತೆ ಹಣಕಾಸು ತ:ಖ್ತೆಗಳು ವಿಷಯಕ ತಪ್ಪು ಹೇಳಿಕೆಗಳಿಂದ ಮುಕ್ತಾವಾಗಿರುವವೇ ಎಂಬುದರ ಬಗ್ಗೆ ಒಂದು ನ್ಯಾಯಸಮ್ಮತ ಭರವಸೆಯನ್ನು ಪಡೆಯುವುದಕ್ಕಾಗಿ ಲೆಕ್ಕಪರಿಶೋಧನೆಯ ಬಗ್ಗೆ ಪೂರ್ವಭಾವಿಯಾಗಿ ಯೋಜಿಸಿ ಹಾಗೂ ನಡೆಸುವ ಅಗತ್ಯತೆಯನ್ನು ಆ ಮಾನದಂಡಗಳು ಹೊಂದಿರುತ್ತವೆ,

ಹಣಕಾಸು ತ:ಖ್ತೆಗಳಲ್ಲಿ ತೋರಿಸಲಾಗಿರುವ ಮೊತ್ತಗಳು ಹಾಗೂ ಬಹಿರಂಗಪಡಿಸುವಿಕೆಗಳ ಬಗ್ಗೆ ಲೆಕ್ಕಪರಿಶೋಧನಾ ಸಾಕ್ಷಾಧಾರಗಳನ್ನು ಪಡೆದುಕೊಳ್ಳುವುದಕ್ಕಾಗಿ ಒಂದು ಲೆಕ್ಕಪರಿಶೋಧನೆಯು ಕಾರ್ಯನಿರ್ವಹಣಾ ವಿಧಾನಗಳನ್ನು ಒಳಗೊಂಡಿರುತ್ತದೆ. ವಂಚನೆಯಿಂದಾಗಲೀ ಅಥವಾ ಆಕಸ್ಮಿಕ ತಪ್ಪುಗಳಿಂದಲೇ ಆಗಲಿ ಹಣಕಾಸು ತ:ಖ್ತೆಗಳು ವಿಷಯಕ ತಪ್ಪು ಹೇಳಿಕೆಗಳ ಸಂಭಾವ್ಯ ಅಪಾಯಗಳ ನಿರ್ಧಾರಣೆಯನ್ನು ಒಳಗೊಂಡಂತೆ ಆಯ್ಕೆ ಮಾಡಿಕೊಳ್ಳಲಾಗುವ ಕಾರ್ಯವಿಧಾನವು ಲೆಕ್ಕಪರಿಶೋಧಕರುಗಳ ತಿರ್ಮಾಣವನ್ನು ಅವಲಂಭಿಸಿರುತ್ತದೆ. ಅಂತಹ ಸಂಭಾವ್ಯ ಅಪಾಯಗಳ ನಿರ್ಧಾರಣೆಗಳನ್ನು ಮಾಡುವಲ್ಲಿ, ಲೆಕ್ಕಪರಿಶೋಧಕರು ಸಂಸ್ಥೆಯ ಸಿದ್ಧತೆಗೆ ಹಾಗೂ ಹಣಕಾಸು ತ:ಖ್ತೆಗಳ ಯಥಾರ್ಥತೆಯಿಂದ ಕೂಡಿದ ತಯಾರಿಕೆಗೆ ನಿರ್ಧಿಷ್ಟ ಸಂದರ್ಭಗಳಲ್ಲಿ ಸೂಕ್ತವೆನಿಸುವ ಲೆಕ್ಕಪರಿಶೋಧನಾ ಕಾರ್ಯವಿಧಾನಗಳನ್ನು ರೂಪಿಸುವ ಸಲುವಾಗಿ ಸೂಕ್ತವಾದಂತಹ ಆಂತರಿಕ ನಿಯಂತ್ರನವನ್ನು ಲೆಕ್ಕಪರಿಶೋಧಕರು ಪರಿಗಣಿಸುತ್ತಾರೆಯೇ ಹೊರತು ಲೆಕ್ಕಪರಿಶೋಧನೆಗೆ ಒಳಪಡುವ ಸಂಸ್ಥೆಯ ಆಂತರಿಕ ನಿಯಂತ್ರಣದ ಪರಿಣಾಮಕಾರಿತ್ವದ ಮೇಲೆ ಒಂದು ಅಭಿಪ್ರಾಯವನ್ನು ವ್ಯಕ್ತಪಡಿಸುವ ಉದ್ದೇಶಕ್ಕಾಗಿ ಆಗಿರುವುದಿಲ್ಲ. ಒಂದು ಲೆಕ್ಕಪರಿಶೋಧನೆಯು, ಬಳಸಿಕೊಳ್ಳಲಾಗಿರುವ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಕಾರ್ಯನೀತಿ ಹಾಗೂ ವ್ಯವಸ್ಥಾಪನೆಯು ಮಾಡಿರುವ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಅಂದಾಜುಗಳ ನ್ಯಾಯಸಮ್ಮತತೆ ಹಾಗೂ ಅಲ್ಲದೆಯೇ ಹಣಕಾಸು ತ:ಖ್ತೆಗಳ ಒಟ್ಟಾರೆ ಮಂಡನೆಯ ಸೂಕ್ತತೆಗಳನ್ನು ಮೌಲ್ಯಮಾಪನ ಮಾಡುವುದನ್ನೂ ಸಹ ಒಳಗೊಂಡಿರುತ್ತದೆ.

ನಾವು ಪಡೆದುಕೊಂಡಿರುವ ಲೆಕ್ಕಪರಿಶೋಧನೆಗೆ ಸಂಬಂಧಿತ ಸಾಕ್ಷಾಧಾರಗಳು ಹಣಕಾಸು ತ:ಖ್ತೆಗಳ ಬಗ್ಗೆ ನಮ್ಮ ಲೆಕ್ಕಪರಿಶೋಧನಾ ಅಭಿಪ್ರಾಯಗಳನ್ನು ವ್ಯಕ್ತಪಡಿಸುವುದಕ್ಕೆ ಒಂದು ಆಧಾರವನ್ನು ಒದಗಿಸುವಲ್ಲಿ ಸಮರ್ಪಕವಾಗಿವೆ ಹಾಗೂ ಸೂಕ್ತವಾಗಿವೆ ಎಂಬುದನ್ನು ನಾವು ನಂಬಿದ್ದೇವೆ.

4. ಷರತ್ತುಗಳಿಗೆ ಒಳಪಟ್ಟ ಅಭಿಪ್ರಾಯಗಳಿಗೆ ಆಧಾರ:

4.1 ಟಿಪ್ಪಣಿ ಸಂಖ್ಯೆ 2: ಸರ್ಕಾರದಿಂದ ಸ್ವೀಕರಿಸಿದ ಅನುದಾನಗಳನ್ನು ನಿರ್ವಹಿಸಿದ್ದು ಮತ್ತು ಪರಿಗಣಿಸಿದ್ದು ಹಾಗೂ ಆ ಅನುದಾನಗಳಿಂದ ಆಸ್ತಿಯನ್ನು ಸೃಷ್ಟಿಸಿದ್ದರ ಬಗ್ಗೆ ಹೇಳುವುದಾದರೆ, ಅವು – ಸರ್ಕಾರದ ಅನುದಾನಗಳನ್ನು ಲೆಕ್ಕ ಇಡುವುದಕ್ಕೆ ಸಂಬಂಧಿತ ಮಾನದಂಡ ಎಎಸ್–12 ಪ್ರಕಾರ ಇಲ್ಲದಿರುವ ಬಗ್ಗೆ

4.1.1 ಸರ್ಕಾರದಿಂದ ಸ್ವೀಕರಿಸಿದ ಸರ್ಕಾರದಿಂದ ಸ್ವೀಕರಿಸಿದ ಅನುದಾನಗಳನ್ನು ಬಂಡವಾಳ ಹಾಗೂ ವರಮಾನಗಳಾಗಿ ವಿಂಗಡಣೆ ಮಾಡಿಲ್ಲ. ತರುವಾಯ, 31 ಮಾರ್ಚ್ 1998ಕ್ಕೆ ಮುಂಚಿನ ಅವಧಿಗೆ ಸಂಬಂಧಿತ ಅನುದಾನಗಳ ಸ್ವೀಕೃತಿಗಳು ಮತ್ತು ಅವುಗಳಿಗೆ ಪ್ರತಿಯಾಗಿ ಆಗಿರುವಂತಹ ವೆಚ್ಚಗಳನ್ನು ಸಮನ್ವಯಗೊಳಿಸುವ ಅಗತ್ಯತೆಯಿರುತ್ತದೆ.

4.1.2 ಬಂಡವಾಳ ಅನುದಾನವನ್ನು ಆದಾಯ ತ:ಖ್ತೆಯಲ್ಲಿ ತೋರಿಸದೇ ಇರುವುದರ ಪರಿಣಾಮದ ಮೇಲೆ ಹಾಗೂ 31 ಮಾರ್ಚ್ 1998ರವರೆಗೆ ಸ್ವೀಕರಿಸಲಾದ ಬಂಡವಾಳ ಅನುದಾನಗಳಿಂದ ಸೃಷ್ಟಿಸಲಾಗಿದ್ದ ಆಸ್ತಿಗಳ ಮೇಲೆ ಕೋರಲಾದ ಸವಕಳಿಯ ಮೊತ್ತದ ಮೇಲೆ ನಾವು ಟೀಕೆಟಿಪ್ಪಣಿ ಮಾಡಲು ಸಾಧ್ಯವಾಗಲಿಲ್ಲ.

4.1.3 ರೂ.27,22,76,240/–ರಷ್ಟು (ರೂಪಾಯಿಗಳು ಇಪ್ಪತ್ತ ಏಳು ಕೋಟಿ ಇಪ್ಪತ್ತ ಎರಡು ಲಕ್ಷ ಎಪ್ಪತ್ತ ಆರು ಸಾವಿರ ಇನ್ನೂರ ನಲವತ್ತು ಮಾತ್ರ) ಮೊತ್ತದ ಬಳಕೆಯಾಗದೇ ಉಳಿದಿದ್ದ

ಬಂಡವಾಳ ಅನುದಾನಗಳನ್ನು ಚಾಲ್ತಿಯದಲ್ಲದ ಜವಾಬ್ದಾರಿಗಳ ಬದಲಾಗಿ ಕಾದಿರಿಸಿರುವಿಕೆಗಳು ಮತ್ತು ಮಿಗುತಾಯಗಳು ಎಂಬುದಾಗಿ ಪರಿಗಣಿಸಲಾಗಿದ್ದಿತು.

4.1.4 ಬಳಕೆಯಾಗದೇ ಉಳಿದಿದ್ದ ಅನುದಾನಗಳಿಗೆ ಸಂಬಂಧಿತ ನಿಶ್ಚಿತ ಅವಧಿ ಠೇವಣಿಗಳ ಮೇಲಿನ ಬಡ್ಡಿ ವರಮಾನವನ್ನು ಕಾರ್ಯಾಚರಣೆಯಲ್ಲಿಲ್ಲದ ಆದಾಯವೆಂಬುದಾಗಿ ಪರಿಗಣಿಸಲಾಗಿದ್ದಿತು.

4.1.5 ಬಳಕೆಯಾಗದೇ ಉಳಿದಿರುವ ಅನುದಾನಗಳ ಹಣಕಾಸಿಗೆ ಸಂಬಂಧಿಸಿದಂತೆ ಇರುವ ನಿಶ್ಚಿತ ಅವಧಿ ಠೇವಣಿಗಳು ರೂ.12,23,40,500/– (ರೂಪಾಯಿಗಳು ಹನ್ನೆರಡು ಕೋಟಿ ಇಪ್ಪತ್ತ ಮೂರು ಲಕ್ಷ ನಲವತ್ತು ಸಾವಿರದ ಐದು ನೂರು ಮಾತ್ರ).

4.2 ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಮಾನದಂಡ – 28ರ ಅನುಸಾರ ಅಗತ್ಯವಿರುವಂತೆ ದುರ್ಬಲಗೊಂಡಿರುವ ಆಸ್ತಿಗಳಿಗೆ ಅನುವು ಮಾಡದಿರುವುದಕ್ಕೆ ಸಂಬಂಧಿಸಿದಂತೆ.

5. ಷರತ್ತುಬದ್ಧ ಅಭಿಪ್ರಾಯ

5.1 ಮೇಲಿನ ಕಂಡಿಕೆ 4ರಲ್ಲಿನ ನಮ್ಮ ಟೀಕೆಟಿಪ್ಪಣಿಗಳ ಷರತ್ತಿಗೆ ಒಳಪಟ್ಟಂತೆ ನಾವು ಈ ಕೆಳಗಿನಂತೆ ವರದಿಯನ್ನು ಮಾಡುತ್ತಿರುವೆವು:

ನಮ್ಮ ಅಭಿಪ್ರಾಯದಲ್ಲಿ ಹಾಗೂ ನಮಗೆ ಲಭ್ಯವಾಗಿರುವ ಅತ್ಯುತ್ತಮ ಮಾಹಿತಿಯ ಪ್ರಕಾರ ಹಾಗೂ ನಮಗೆ ನೀಡಿರುವ ವಿವರಣೆಗಳ ಪ್ರಕಾರ, ಹಣಕಾಸು ತ:ಖ್ತೆಗಳು ಅಧಿನಿಯಮದ ಅಗತ್ಯತೆಯ ಪ್ರಕಾರ ಹಾಗೂ ಅಗತ್ಯತೆಯಿರುವ ರೀತಿಯಲ್ಲಿ ಹಾಗೂ ಭಾರತದಲ್ಲಿ ಸರ್ವೇಸಾಮಾನ್ಯವಾಗಿ ಒಪ್ಪಿಕೊಳ್ಳಲಾಗಿರುವ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ತತ್ವಗಳ ಅನುಸಾರ ಮಾಹಿತಿಯನ್ನು ನೀಡುತ್ತವೆ.

ಎ. ಆಸ್ತಿ–ಜವಾಬ್ದಾರಿ ತ:ಖ್ತೆಗೆ ಸಂಬಂಧಿಸಿದಂತೆ, 31 ಮಾರ್ಚ್ 2018ರಲ್ಲಿದ್ದಂತೆ ಕಂಪನಿಯ ವ್ಯವಹಾರಗಳ ಸ್ಥಿತಿಗತಿಗಳು.

ಬಿ. ಲಾಭ ಮತ್ತು ನಷ್ಟ ತ:ಖ್ತೆಗೆ ಸಂಬಂಧಿಸಿದಂತೆ ಆ ದಿನಾಂಕದಂದು (31 ಮಾರ್ಚ್ 2018) ಅಂತ್ಯಗೊಂಡ ಸಾಲಿಗೆ ಗಳಿಸಲಾಗಿರುವ ಲಾಭ.

ಸಿ. ನಗದು/ಹಣಕಾಸಿನ ಹರಿವಿನ ತ:ಖ್ತೆಗೆ ಸಂಬಂಧಿಸಿದಂತೆ ಆ ದಿನಾಂಕದಂದು (31 ಮಾರ್ಚ್ 2018) ಅಂತ್ಯಗೊಂಡ ಸಾಲಿನ ನಗದು/ಹಣಕಾಸಿನ ಹರಿವು.

6. ವಿಷಯಕದ ಸ್ಪುಟತೆ

6.1 ಇತರೆ *ಚಿಲ್ಲರೆ ಸಾಲಗಾರರಿಂದ ಬರಬೇಕಾದ ಬಾಕಿಗಳು, ಚಿಲ್ಲರೆ ಸಾಲಿಗರು ಹಾಗೂ ಸಾಲಗಳು ಮತ್ತು ಮುಂಗಡಗಳ ಬಾಕಿಗಳು ಸ್ಥಿರೀಕರಣಕ್ಕೊಳಪಡುವ ಷರತ್ತಿಗೆ ಒಳಪಟ್ಟಿವೆ. ಸಂಬಂಧಿತ ಮಾಹಿತಿಯ ಅನುಪಸ್ಥಿತಿಯಲ್ಲಿ ಚಿಲ್ಲರೆ ಸಾಲಗಾರರು, ಚಿಲ್ಲರೆ ಸಾಲಿಗರು ಹಾಗೂ ಸಾಲಗಳು ಮತ್ತು ಮುಂಗಡಗಳ ಮೇಲೆ ನಾವು ಟೀಕೆಟಿಪ್ಪಣೆಗಳನ್ನು ಮಾಡಲಾಗಲಿಲ್ಲ.*

6.2 ಬಂಡೀಪುರದ ಹತ್ತಿರ ಸಿದ್ಧಯ್ಯನಪುರ ಹಳ್ಳಿಯಲ್ಲಿ ಜಂಗಲ್ ಲಾಡ್ಜಸ್ ಅಂಡ್ ರಿಸಾರ್ಟ್ 2005–06ರಲ್ಲಿ ರೂ.1,70,478/–ರಷ್ಟು (ರೂಪಾಯಿಗಳು ಒಂದು ಲಕ್ಷ ಎಪ್ಪತ್ತು ಸಾವಿರದ ನಾಲ್ಕು ನೂರ ಎಪ್ಪತ್ತ ಎಂಟು ಮಾತ್ರ) ಮೊತ್ತದಲ್ಲಿ ಖರೀದಿಸಿದ ಭೂಮಿಯನ್ನು ಸಾಮಾನ್ಯ ವ್ಯವಹಾರಾಧಿಕಾರವನ್ನು (ಜಿಪಿಎ) ಹೊಂದಿದ್ದ ಕಂಪನಿಯ ಆಗಿನ ವ್ಯವಸ್ಥಾಪಕ ನಿರ್ದೇಶಕರ ಹೆಸರಿನಲ್ಲಿ

ನೋಂದಣಿ ಮಾಡಲಾಗಿದ್ದಿತು. ಮೇಲೆ ಉಲ್ಲೇಖಿಸಲಾದ ಆಸ್ತಿಯ ಹಕ್ಕು ಪತ್ರವನ್ನು ಕಂಪನಿಯ ಹೆಸರಿಗೆ ಇನ್ನೂ ವರ್ಗಾಯಿಸಬೇಕಾಗಿದೆ.

6.3 ಈ ಹಿಂದಿನ ಸಾಲುಗಳಲ್ಲಿ ಅನುದಾನಗಳಿಂದ ಸೃಷ್ಟಿಸಲಾಗಿದ್ದ ಆಸ್ತಿಗಳ ಮೇಲಿನ ಸವಕಳಿಗೆ ಸಂಬಂಧಿತ ಮೊತ್ತ ರೂ.39,63,068/–ರಷ್ಟು (ರೂಪಾಯಿಗಳು ಮೂವತ್ತೊಂಬತು ಲಕ್ಷ ಅರವತ್ತ ಮೂರು ಸಾವಿರ ಅರವತ್ತ ಎಂಟು ಮಾತ್ರ) ಮೊತ್ತದ ನಮೂದನ್ನು ಲೆಕ್ಕಪತ್ರಗಳಲ್ಲಿ ಹಿಂದುಮುಂದು ಮಾಡಲಾಗಿದೆ/ವಿಪರ್ಯಸ್ತಗೊಳಿಸಲಾಗಿದೆ.

6.4 ಈ ಹಿಂದಿನ ಸಾಲುಗಳಲ್ಲಿ ಪ್ರಮಾಣಾನುಗುಣ ಆಧಾರದ ಮೇರೆಗೆ ಸವಕಳಿಯನ್ನು ಅನುವು ಮಾಡದಿದ್ದ ಕಾರಣ ಅಧಿಕ ಪ್ರಮಾಣದಲ್ಲಿ ಖರ್ಚಿಗೆ ಹಾಕಲಾಗಿದ್ದ ಸವಕಳಿಯ ಮೊತ್ತ ರೂ.5,97,628/–ರಷ್ಟು (ರೂಪಾಯಿಗಳು ಐದು ಲಕ್ಷ ತೊಂಬತ್ತ ಏಳು ಸಾವಿರ ಆರು ನೂರ ಇಪ್ಪತ್ತ ಎಂಟು ಮಾತ್ರ) ಮೊತ್ತದ ನಮೂದನ್ನು ಹಿಂದುಮುಂದು ಮಾಡಲಾಗಿದೆ/ವಿಪರ್ಯಸ್ತಗೊಳಿಸಲಾಗಿದೆ.

7. *ಇತರೆ ಕಾನೂನು ಮತ್ತು ನಿಯಂತ್ರಕ ಅಗತ್ಯತೆಗಳ ಮೇಲಿನ ವರದಿ*

7.1 ಭಾರತ ಸರ್ಕಾರವು ಕಂಪನಿಗಳ ಅಧಿನಿಯಮ 2013ರ ಪರಿಚ್ಛೇದ 143ರ ಉಪ–ಪರಿಚ್ಛೇದ (11)ರ ಷರತ್ತುಗಳಂತೆ ಕಂಪನಿಗಳ (ಲೆಕ್ಕಪರಿಶೋಧಕರ ವರದಿ) ಆದೇಶ, 2016ರ ಅಗತ್ಯತೆಯಂತೆ, ಮೇಲೆ ತಿಳಿಸಲಾದಂತಹ ಆದೇಶದ ಕಂಡಿಕೆಗಳು 3 ಮತ್ತು 4ರಲ್ಲಿ ನಿರ್ದಿಷ್ಟಪಡಿಸಲಾಗಿರುವ ವಿಷಯಗಳ ಮೇಲೆ ಒಂದು ತ:ಖ್ತೆಯನ್ನು ನಾವು ಅನುಬಂಧ–ಎ ಎಂಬುದಾಗಿ ಲಗತ್ತಿಸಿರುವೆವು.

7.2 ಅಧಿನಿಯಮದ ಪರಿಚ್ಛೇದ 143ರ ಉಪ–ಕಂಡಿಕೆ (11)ರ ಷರತ್ತುಗಳ ಪ್ರಕಾರ ನಾವು ಈ ಕೆಳಗಿನಂತೆ ವರದಿಯನ್ನು ಮಾಡುತ್ತಿರುವೆವು :

ಎ) ನಮ್ಮ ಲೆಕ್ಕಪರಿಶೋಧನೆಯ ಉದ್ದೇಶಕ್ಕೆ ನಮ್ಮ ಅತ್ಯುತ್ತಮ ಅರಿವಿಗೆ ಹಾಗೂ ನಂಬಿಕೆಯ ಪ್ರಕಾರ ಅಗತ್ಯವೆಂಬುದಾಗಿ ಪರಿಗಣಿಸಲಾಯಿತೋ ಅಂತಹ ಎಲ್ಲಾ ಮಾಹಿತಿ ಹಾಗೂ ವಿವರಣೆಗಳನ್ನು ಪಡೆದುಕೊಂಡಿರುವೆವು.

ಬಿ) ಕಂಡಿಕೆ 4ರಲ್ಲಿ ವಿವರಿಸಲಾಗಿರುವಂತಹ ವಿಷಯದ ಪ್ರಭಾವಗಳನ್ನು ಹೊರತುಪಡಿಸಿದಂತೆ, ನಮ್ಮ ಅಭಿಪ್ರಾಯದಲ್ಲಿ, ನಾವು ಪರಿಶೀಲಿಸಲಾದ ಲೆಕ್ಕ ಪುಸ್ತಕಗಳಿಂದ ಗಮನಿಸಲಾದಂತೆ ಕಂಪನಿಯು ನಿಯಮಗಳ ಪ್ರಕಾರ ಅಗತ್ಯವಿರುವ ಸಮರ್ಪಕ ಲೆಕ್ಕಪುಸ್ತಕಗಳನ್ನು ಇಟ್ಟಿರುವುದು. [ಹಾಗೂ ನಾವು ಭೇಟಿ ನೀಡದ ಶಾಖೆಗಳಿಂದ ನಮ್ಮ ಲೆಕ್ಕಪರಿಶೋಧನೆಯ ಉದ್ದೇಶಕ್ಕಾಗಿ ಸಮರ್ಪಕವಾದಂತಹ ಸಲ್ಲಿಕೆಗಳನ್ನು ಸ್ವೀಕರಿಸಲಾಗಿರುವುದು].

ಸಿ) ಈ ವರದಿಯಲ್ಲಿ ಉಲ್ಲೇಖಿಸಲ್ಪಟ್ಟಿರುವ ಆಸ್ತಿ ಮತ್ತು ಜವಾಬ್ದಾರಿ ತ:ಖ್ತೆ ಹಾಗೂ ಲಾಭ ಮತ್ತು ನಷ್ಟ ತ:ಖ್ತೆಗಳು ಲೆಕ್ಕ ಪುಸ್ತಕಗಳಿಗೆ ತಾಳೆ ಹೊಂದುತ್ತವೆ.

ಡಿ) ನಮ್ಮ ಅಭಿಪ್ರಾಯದಲ್ಲಿ ಆಸ್ತಿ ಮತ್ತು ಜವಾಬ್ದಾರಿ ತ:ಖ್ತೆ ಹಾಗೂ ಲಾಭ ಮತ್ತು ನಷ್ಟ ತ:ಖ್ತೆಗಳನ್ನು, ಕಂಪನಿಗಳ (ಲೆಕ್ಕಪತ್ರಗಳು) ನಿಯಮಗಳು, 2014ರ ನಿಯಮ 7ರ ಜೊತೆಯಲ್ಲಿ ಓದಲ್ಪಡುವ ಅಧಿನಿಯಮದ ಪರಿಚ್ಛೇದ 133 ಅಡಿಯಲ್ಲಿ ನಿರ್ದಿಷ್ಟಪಡಿಸಲಾಗಿರುವ ಲೆಕ್ಕಪತ್ರಗಳನ್ನಿಡುವುದಕ್ಕೆ ಸಂಬಂಧಿತ ಮಾನದಂಡಗಳ ಅನುಸಾರವೇ ತಯಾರಿಸಲಾಗಿದೆ.

ಇ) 31 ಮಾರ್ಚ್ 2018ರಲ್ಲಿದ್ದಂತೆ ನಿರ್ದೇಶಕರುಗಳಿಂದ ಪಡೆದ ಲಿಖಿತ ಹೇಳಿಕೆಯ ಆಧಾರದ ಮೇರೆಗೆ ಹಾಗೂ ಮಂಡಳಿಯ ನಿರ್ದೇಶಕರುಗಳು ದಾಖಲಿಸಿಕೊಂಡಿರುವಂತೆ, 31 ಮಾರ್ಚ್

2018ರಲ್ಲಿದ್ದ ಸ್ಥಿತಿಗತಿಯಂತೆ ಕಂಪನಿಗಳ ಅಧಿನಿಯಮ, 1956ರ ಪರಿಚ್ಛೇದ 164(2)ರ ಪ್ರಕಾರ ಓರ್ವ ನಿರ್ದೇಶಕನಾಗಿ ನೇಮಕಗೊಳ್ಳಲು ಯಾವುದೇ ನಿರ್ದೇಶಕರು ಅನರ್ಹಗೊಂಡಿರಲಿಲ್ಲ.

ಎಫ್. ಕಂಪನಿಯ ಹಣಕಾಸಿನ ವರದಿಗಳ ಮೇಲೆ ಆಂತರಿಕ ಹಣಕಾಸು ನಿಯಂತ್ರಣಗಳ ಸಮರ್ಪಕತೆಗೆ ಸಂಬಂಧಿಸಿದಂತೆ ಹಾಗೂ ಅಂತಹ ನಿಯಂತ್ರಣಗಳ ಕಾರ್ಯಾಚರಣೆಯ ಪರಿಣಾಮಕಾರಿತ್ವಕ್ಕೆ ಸಂಬಂಧಿಸಿದಂತೆ, **'ಅನುಬಂಧ ಬಿ'**ಯಲ್ಲಿ ನೀಡಲಾಗಿರುವ ನಮ್ಮ ಪ್ರತ್ಯೇಕ ವರದಿಯನ್ನು ಉಲ್ಲೇಖಿಸುವುದು.

ಜಿ) ಕಂಪನಿಗಳ (ಲೆಕ್ಕಪರಿಶೋಧನೆ ಮತ್ತು ಲೆಕ್ಕಪರಿಶೋಧಕರು) ನಿಯಮಗಳು, 2014ರ ನಿಯಮ 11ರ ಅನುಸಾರ ಲೆಕ್ಕಪರಿಶೋಧಕರ ವರದಿಯಲ್ಲಿ ಸೇರಿಸಬೇಕಾದ ಇತರೆ ವಿಷಯಗಳಿಗೆ ಸಂಬಂಧಿಸಿದಂತೆ, ನಮ್ಮ ಅಭಿಪ್ರಾಯದಲ್ಲಿ ಮತ್ತು ನಮ್ಮ ಅರಿವಿಗೆ ಬಂಧಿರುವಂತೆ ಮತ್ತು ನಮಗೆ ನೀಡಲಾಗಿರುವ ವಿವರಣೆಗಳಂತೆ :

i ಕಂಪನಿಯು ತನ್ನ ಹಣಕಾಸು ಸ್ಥಿತಿಗತಿಗಳ ಮೇಲೆ ಬಾಕಿ ಇರುವ ವಿವಾದಗಳನ್ನು ತನ್ನ ಹಣಕಾಸು ತ:ಖ್ತೆಗಳಲ್ಲಿ ಬಹಿರಂಗಪಡಿಸಿದೆ – ಹಣಕಾಸು ತ:ಖ್ತೆಗಳ ಒಂದು ಭಾಗವಾಗಿರುವ **ಅನುಬಂಧ–'ಸಿ'** ಯಲ್ಲಿ ಗಮನಿಸುವುದು;

ii. ಭೌತಿಕವಾಗಿ ನಿರೀಕ್ಷಿಸಬಹುದಾದಷ್ಟು ಸಮೀಪದಲ್ಲಿರುವ ನಷ್ಟಗಳು ಸಂಭವಿಸುವ ರೀತಿಯಲ್ಲಿನ ಜನ್ಯ/ವ್ಯುತ್ಪನ್ನ ಗುತ್ತಿಗೆಗಳೂ ಸೇರಿದಂತೆ ಯಾವುದೇ ದೀರ್ಘಾವಧಿ ಗುತ್ತಿಗೆಗಳಿಂದ ಯಾವುದೇ ವಿಷಯಕ ನಷ್ಟಗಳನ್ನೂ ನಿರೀಕ್ಷಿಸಿರುವುದಿಲ್ಲ.

iii. ಹೂಡಿಕೆದಾರರ ಶಿಕ್ಷಣ ಹಾಗೂ ಸಂರಕ್ಷಣಾ ನಿಧಿಗೆ ಕಂಪನಿಯಿಂದ ವರ್ಗಾಯಿಸುವ ಅಗತ್ಯತೆಯಿರುವ ಯಾವುದೇ ಮೊತ್ತಗಳೂ ಇರುವುದಿಲ್ಲ.

7.3 ಕಂಪನಿಗಳ ಅಧಿನಿಯಮ, 2013ರ ಪರಿಚ್ಛೇದ 143(5)ರ ಅಡಿಯಲ್ಲಿ ಅಗತ್ಯತೆಯಿರುವಂತೆ, ಮೇಲೆ ತಿಳಿಸಲಾಗಿರುವ ಕಂಪನಿಗೆ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು ನೀಡಿರುವ ನಿರ್ದೇಶನಗಳನ್ನು ನಾವು ಅನುಬಂಧ 'ಡಿ' ಯಲ್ಲಿ ನೀಡಿರುವೆವು.

ಟಿ. ಶ್ರೀರಾಮ್, ಮೆಹ್ತಾ ಅಂಡ್ ತಡಿಮಲ್ಲ ಇವರುಗಳಿಗಾಗಿ
ಚಾರ್ಟರ್ಡ್ ಅಕೌಂಟೆಂಟ್ಸ್
ಸಂಸ್ಥೆಯ ನೋಂದಣಿ ಸಂಖ್ಯೆ 004064ಎಸ್

––ಸಹಿ ಮಾಡಲಾಗಿದೆ––
ಕವಿತಾ ಪಿ.
ಪಾಲುದಾರರು
ಸದಸ್ಯತ್ವ ಸಂಖ್ಯೆ 217569

ಸ್ಥಳ : ಬೆಂಗಳೂರು
ದಿನಾಂಕ 29 ಅಕ್ಟೋಬರ್ 2018

ಸ್ವತಂತ್ರ ಲೆಕ್ಕಪರಿಶೋಧಕರ ವರದಿಗೆ "ಅನುಬಂಧ ಎ"

31 ಮಾರ್ಚ್ 2018ಕ್ಕೆ ಅಂತ್ಯಗೊಂಡ ಸಾಲಿಗೆ ಕಂಪನಿಯ ಹಣಕಾಸು ತ:ಖ್ತೆಗಳಿಗೆ ನಮ್ಮ ಅದೇ ದಿನಾಂಕದ ವರದಿಯಲ್ಲಿ "ಇತರೆ ಕಾನೂನಾತ್ಮಕ ಮತ್ತು ನಿಯಂತ್ರಕ ಅಗತ್ಯತೆಗಳು" ಶೀರ್ಷಿಕೆಯ ಅಡಿಯಲ್ಲಿ ಕಂಡಿಕೆ 1ರಲ್ಲಿ ಉಲ್ಲೇಖಿಸಲಾಗಿರುವಂತೆ.

i. (ಎ) ಕಂಪನಿಯು ಸ್ಥಿರಾಸ್ತಿಗಳ ವಹಿಯನ್ನು ನಿರ್ವಹಿಸಿರುವುದು. **ಆದಾಗ್ಯೂ, ಸ್ಥಿರಾಸ್ತಿಗಳ ಪರಿಮಾಣಾತ್ಮಕ ವಿವರಗಳು ಇರುವ ಸ್ಥಳ, ಇತ್ಯಾದಿಗಳು ಇನ್ನೂ ಸಂಕಲನೆಯ ಪ್ರಕ್ರಿಯೆಯಲ್ಲಿರುತ್ತವೆ.**

(ಬಿ) ಪ್ರಸಕ್ತ ಸಾಲಿನಲ್ಲಿ ಕಂಪನಿಯು ಸ್ಥಿರಾಸ್ತಿಗಳ ಭೌತಿಕ ಪರೀಕ್ಷಣೆಯನ್ನು ನಡೆಸಿರುವುದಿಲ್ಲ. ಆದ್ದರಿಂದ ಅದರ ಬಗ್ಗೆ ನಾವು ಯಾವುದೇ ಟೀಕೆಟಿಪ್ಪಣಿಗಳನ್ನು ಮಾಡಲು ಸಾಧ್ಯವಿರುವುದಿಲ್ಲ.

(ಸಿ) ನಮಗೆ ಒದಗಿಸಲಾಗಿರುವ ಮಾಹಿತಿಯಂತೆ ಮತ್ತು ನೀಡಲಾಗಿರುವ ವಿವರಣೆಗಳಂತೆ ಹಾಗೂ ನಮ್ಮ ಅತ್ಯುತ್ತಮ ಅರಿವಿನಂತೆ *ಬಂಡೀಪುರದ ಹತ್ತಿರ ಸಿದ್ಧಯ್ಯನಪುರ ಹಳ್ಳಿಯಲ್ಲಿ ಜಂಗಲ್ ಲಾಡ್ಜಸ್ ಅಂಡ್ ರಿಸಾರ್ಟ್ 2005–06ರಲ್ಲಿ ರೂ.1,70,478/–ರಷ್ಟು (ರೂಪಾಯಿಗಳು ಒಂದು ಲಕ್ಷ ಎಪ್ಪತ್ತು ಸಾವಿರದ ನಾಲ್ಕು ನೂರ ಎಪ್ಪತ್ತ ಎಂಟು ಮಾತ್ರ) ಮೊತ್ತದಲ್ಲಿ ಖರೀದಿಸಿದ ಭೂಮಿಯನ್ನು ಸಾಮಾನ್ಯ ವ್ಯವಹಾರಾಧಿಕಾರವನ್ನು (ಜಿಪಿಎ) ಹೊಂದಿದ್ದ ಕಂಪನಿಯ ಆಗಿನ ವ್ಯವಸ್ಥಾಪಕ ನಿರ್ದೇಶಕರ ಹೆಸರಿನಲ್ಲಿ ನೋಂದಣಿ ಮಾಡಲಾಗಿದ್ದಿತು. ಮೇಲೆ ಉಲ್ಲೇಖಿಸಲಾದ ಆಸ್ತಿಯ ಹಕ್ಕು ಪತ್ರವನ್ನು ಕಂಪನಿಯ ಹೆಸರಿಗೆ ಇನ್ನೂ ವರ್ಗಾಯಿಸಬೇಕಾಗಿದೆ.*

ii (ಎ) ನಮಗೆ ನೀಡಲಾಗಿರುವ ಮಾಹಿತಿಯಂತೆ ಮತ್ತು ವಿವರಣೆಗಳಂತೆ, ವ್ಯವಸ್ಥಾಪನೆಯು ಪ್ರಸಕ್ತ ಸಾಲಿನಲ್ಲಿ ಸರಕುಸಾಮಗ್ರಿಗಳ ಪರಿಶೀಲನೆಯನ್ನು ನಡೆಸಿರುವುದಿಲ್ಲ.

(ಬಿ) ನಮ್ಮ ಅಭಿಪ್ರಾಯದಲ್ಲಿ, ಕಂಪನಿಯು ಸರಕುಸಾಮಗ್ರಿಗಳಿಗೆ ಸಂಬಂಧಿಸಿದಂತೆ ಸಮರ್ಪಕ ದಾಖಲೆಗಳನ್ನು ನಿರ್ವಹಿಸಿರುವುದಿಲ್ಲ. ಭೌತಿಕ ದಾಸ್ತಾನುಗಳು ಮತ್ತು ಲೆಕ್ಕಪತ್ರಗಳ ಪುಸ್ತಕಗಳಲ್ಲಿನ ಅಂಕಿಸಂಖ್ಯೆಗಳ ನಡುವೆ ಯಾವುದಾದರೂ ವೆತ್ಯಾಸಗಳಿದ್ದಲ್ಲಿ ಅವುಗಳ ಮೇಲೆ ನಾವು ಟೀಕೆಟಿಪ್ಪಣಿಗಳನ್ನು ಮಾಡಲು ಸಾಧ್ಯವಾಗುವುದಿಲ್ಲ.

iii. ಕಂಪನಿಗಳ ಅಧಿನಿಯಮ, 2013ರ ಪರಿಚ್ಛೇದ 189ರ ಅಡಿಯಲ್ಲಿ ನಿರ್ವಹಿಸಲಾಗಿರುವ ವಹಿಯಲ್ಲಿ ದಾಖಲಿಸಲಾಗಿರುವ ಇತರೆ ಕಂಪನಿಗಳಿಗೆ, ಸಂಸ್ಥೆಗಳಿಗೆ ಅಥವಾ ಇತರ ತಂಡಗಳಿಗೆ ಕಂಪನಿಯು ಭದ್ರತೆಯ ಅಥವಾ ಭದ್ರತೆ ಇಲ್ಲದ ಯಾವುದೇ ಸಾಲಗಳನ್ನೂ ನೀಡಿರುವುದಿಲ್ಲ. ಆದ್ದರಿಂದ, ಕಂಪನಿಗಳ (ಲೆಕ್ಕಪರಿಶೋಧಕರ ವರದಿ) ಆದೇಶ, 2016ರ ಷರತ್ತು 3 (iii) ಕಂಪನಿಗೆ ಅನ್ವಯಗೊಳ್ಳುವುದಿಲ್ಲ.

iv. ಕಂಪನಿಯು ಪರಿಚ್ಛೇದಗಳು185 ಮತ್ತು 186ರ ಅನುವುಗಳ ಅಡಿಯಲ್ಲಿ ಯಾವುದೇ ಸಾಲಗಳನ್ನು, ಖಾತರಿಗಳನ್ನು ಭದ್ರತೆಗಳನ್ನು ನೀಡಿರುವುದಿಲ್ಲ ಅಥವಾ ಯಾವುದೇ ಹೂಡಿಕೆಗಳನ್ನು ಮಾಡಿರುವುದಿಲ್ಲ. ಆದ್ದರಿಂದ, ಕಂಪನಿಗಳ (ಲೆಕ್ಕಪರಿಶೋಧಕರ ವರದಿ) ಆದೇಶ, 2016ರ ಷರತ್ತು 3 (iv) ಕಂಪನಿಗೆ ಅನ್ವಯಗೊಳ್ಳುವುದಿಲ್ಲ.

v. ಕಂಪನಿಯು, ಪರಿಚ್ಛೇದಗಳು 73 ಮತ್ತು 74ರ ಅನುವುಗಳು ಹಾಗೂ ಅಧಿನಿಯಮ ಮತ್ತು ನಿಯಮಗಳ ಇತರೆ ಸಂಬಂಧಿತ ಅನುವುಗಳು ಹಾಗೂ ಭಾರತೀಯ ರಿಸರ್ವ್ ಬ್ಯಾಂಕ್ ನೀಡಿರುವ ನಿರ್ದೇಶನಗಳ ಅಡಿಯಲ್ಲಿ ಅನ್ವಯಗೊಳ್ಳುವಂತಹ ಯಾವುದೇ ಠೇವಣಿಗಳನ್ನೂ ಸ್ವೀಕರಿಸಿರುವುದಿಲ್ಲ. ಆದ್ದರಿಂದ, ಕಂಪನಿಗಳ (ಲೆಕ್ಕಪರಿಶೋಧಕರ ವರದಿ) ಆದೇಶ, 2016ರ ಷರತ್ತು 3(v) ಕಂಪನಿಗೆ ಅನ್ವಯಗೊಳ್ಳುವುದಿಲ್ಲ.

vi. ಕೇಂದ್ರ ಸರ್ಕಾರವು ಅಧಿನಿಯಮದ ಪರಿಚ್ಛೇದ 148ರ ಉಪ–ಪರಿಚ್ಛೇದ (1)ರ ಅಡಿಯಲ್ಲಿ ನಿಖರವಾಗಿ ಮೌಲ್ಯ ಲೆಕ್ಕ ಹಾಕುವಿಕೆಗೆ (ಕಾಸ್ಟ್) ಸಂಬಂಧಿತ ದಾಖಲೆಗಳ ನಿರ್ವಹಣೆಯನ್ನು ನಿರ್ದಿಷ್ಟಪಡಿಸಿರುವುದಿಲ್ಲ. ಆದ್ದರಿಂದ, ಕಂಪನಿಗಳ (ಲೆಕ್ಕಪರಿಶೋಧಕರ ವರದಿ) ಆದೇಶ, 2016ರ ಷರತ್ತು 3(vi) ಕಂಪನಿಗೆ ಅನ್ವಯಗೊಳ್ಳುವುದಿಲ್ಲ.

vii. (ಎ) ಕಂಪನಿಯು ನೀಡಿದ ಮಾಹಿತಿಯಂತೆ ಮತ್ತು ನೀಡಲಾದ ವಿವರಣೆಗಳಂತೆ, ಕಂಪನಿಯು ಸಾಮಾನ್ಯವಾಗಿ ಆದಾಯ ತೆರಿಗೆ ಮತ್ತು ತನಗೆ ಅನ್ವಯಗೊಳ್ಳುವ ಇತರೆ ವಿಷಯಕ ಶಾಸನಬದ್ಧ ಬಾಕಿಗಳನ್ನು, ಈ ಕೆಳಗೆ ವಿವರಿಸಿರುವಂತೆ ರೂ.37,88,137/–ರಷ್ಟು (ರೂಪಾಯಿಗಳು ಮೂವತ್ತ ಏಳು ಲಕ್ಷ ಎಂಬತ್ತ ಎಂಟು ಸಾವಿರ ಒಂದು ನೂರ ಮೂವತ್ತ ಏಳು ಮಾತ್ರ) ಸೆಸ್ ಮೊತ್ತವನ್ನು ಹೊರತುಪಡಿಸಿದಂತೆ

ಸಂಬಂಧಪಟ್ಟ ಪ್ರಾಧಿಕಾರಗಳಿಗೆ/ಕಚೇರಿಗಳಿಗೆ ಪಾವತಿಸುವಲ್ಲಿ ನಿಯತವಾಗಿರುತ್ತದೆ.

ಕ್ರಮ ಸಂಖ್ಯೆ	ಅಧಿನಿಯಮದ ಹೆಸರು	ಬಾಕಿಗಳ ಸ್ವರೂಪ	ಮೊತ್ತ ರೂ.
1	ಕಟ್ಟಡಗಳು ಮತ್ತು ಇತರೆ ನಿರ್ಮಾಣ ಕೆಲಸಗಾರರ ಕ್ಷೇಮಾಭಿವೃದ್ಧಿ ಸೆಸ್ ಅಧಿನಿಯಮ, 1996	ಸೆಸ್ಸು	37,88,137

(ಬಿ) ರೂ.6,28,06,613/–ರಷ್ಟು (ರೂಪಾಯಿಗಳು ಆರು ಕೋಟಿ ಇಪ್ಪತ್ತ ಎಂಟು ಲಕ್ಷ ಆರು ಸಾವಿರದ ಹದಿಮೂರು ಮಾತ್ರ) ಮೊತ್ತದ ಶಾಸನಬದ್ಧ ಬಾಕಿಗಳಿಗೆ ಸಂಬಂಧಿಸಿದಂತೆ ವಿಷಯಗಳು ಸಂಬಂಧಿತ ಕಚೇರಿಗಳಲ್ಲಿ ಬಾಕಿಯಿರುವುದರಿಂದ ಪಾವತಿಸಿರುವುದಿಲ್ಲ ಹಾಗೂ ವಿವರಗಳು ಈ ಕೆಳಗಿನಂತಿರುತ್ತವೆ :

ಕ್ರಮ ಸಂಖ್ಯೆ	ಅಧಿನಿಯಮದ ಹೆಸರು	ಬಾಕಿಗಳ ಸ್ವರೂಪ	ವಿವಾದವು ಯಾವ ಕಚೇರಿಯಲ್ಲಿ ಬಾಕಿಯಿರುವುದು	ಮೊತ್ತ ರೂ.
1	ಹಣಕಾಸು ಅಧಿನಿಯಮ 1994ರ ಅಧ್ಯಾಯ ವಿ ಹಾಗೂ ಅಧ್ಯಾಯ ವಿಎ	ಸೇವಾ ತೆರಿಗೆ	ಸೀಮಾಸುಂಕ,ಅಬಕಾರಿ ಮತ್ತು ಸೇವಾ ತೆರಿಗೆ ಮನವಿ ಪ್ರಾಧಿಕಾರ, ದಕ್ಷಿಣ ವಲಯ ಶಾಖೆ, ಬೆಂಗಳೂರು	5,11,74,871

ಕ್ರಮ ಸಂಖ್ಯೆ	ಅಧಿನಿಯಮದ ಹೆಸರು	ಬಾಕಿಗಳ ಸ್ವರೂಪ	ವಿವಾದವು ಯಾವ ಕಚೇರಿಯಲ್ಲಿ ಬಾಕಿಯಿರುವುದು	ಮೊತ್ತ ರೂ.
2	ಆದಾಯ ತೆರಿಗೆ ಅಧಿನಿಯಮ 1961	ಆದಾಯ ತೆರಿಗೆ	ಆದಾಯ ತೆರಿಗೆ ಮನವಿ ಪ್ರಾಧಿಕಾರ	91,73,279
3	ಕರ್ನಾಟಕ ನಗರಪಾಲಿಕೆ ಅಧಿನಿಯಮ, 1976	ಪೌರಾಡಳಿತ ತೆರಿಗೆ	ವಿವಾದದ ಅಡಿಯಲ್ಲಿರುತ್ತದೆ	24,58,463
			ಒಟ್ಟು	**6,28,06,613**

VIII. ಕಂಪನಿಯು ಪ್ರಸಕ್ತ ಸಾಲಿನಲ್ಲಿ ಯಾವುದೇ ಹಣಕಾಸು ಸಂಸ್ಥೆಗಳು, ಬ್ಯಾಂಕುಗಳು, ಸರ್ಕಾರ ಅಥವಾ ಡಿಬೆಂಚರುಗಳನ್ನು ಹೊಂದಿರುವವರಿಂದ ಯಾವುದೇ ಸಾಲಗಳನ್ನು ಪಡೆದಿರುವುದಿಲ್ಲ. ಆದ್ದರಿಂದ ಕಂಪನಿಗಳ (ಲೆಕ್ಕಪರಿಶೋಧಕರ ವರದಿ) ಆದೇಶ, 2016ರ ಷರತ್ತು 3 (viii) ಕಂಪನಿಗೆ ಅನ್ವಯಗೊಳ್ಳುವುದಿಲ್ಲ.

IX. ಕಂಪನಿಯ ದಾಖಲೆಗಳ ಪ್ರಕಾರ, ಕಂಪನಿಯು ಪ್ರಾರಂಭಿಕ ಸಾರ್ವಜನಿಕ ನೀಡಿಕೆ ಅಥವಾ ಮುಂದುವರೆದ ಸಾರ್ವಜನಿಕ ನೀಡಿಕೆಯ ರೂಪದಲ್ಲಿ ಯಾವುದೇ ಹಣಕಾಸನ್ನೂ ಪಡೆದಿರುವುದಿಲ್ಲ. ಆದ್ದರಿಂದ ಕಂಪನಿಗಳ (ಲೆಕ್ಕಪರಿಶೋಧಕರ ವರದಿ) ಆದೇಶ, 2016ರ ಷರತ್ತು 3(ix) ಕಂಪನಿಗೆ ಅನ್ವಯಗೊಳ್ಳುವುದಿಲ್ಲ.

X. ನಮಗೆ ಒದಗಿಸಲಾದ ಮಾಹಿತಿಯಂತೆ ನೀಡಲಾದ ವಿವರಣೆಗಳಂತೆ ಕಂಪನಿಯು ನಮ್ಮ ಲೆಕ್ಕಪರಿಶೋಧನೆಯ ಅವಧಿಯಲ್ಲಿ ಯಾವುದೇ ವಿಷಯಕ ವಂಚನೆಗಳನ್ನು ಮಾಡಿರುವುದಿಲ್ಲ ಅಥವಾ ಕಂಪನಿಯು ಯಾವುದೇ ವಿಷಯಕ ವಂಚನೆಗಳ ಪ್ರಕರಣಗಳನ್ನು ಗಮನಿಸಿರುವುದಿಲ್ಲ.

XI. ಅಧಿನಿಯಮದ ಪರಿಚ್ಛೇದ 197ರ ಅನುವುಗಳು ಸರ್ಕಾರಿ ಕಂಪನಿಗೆ ಅನ್ವಯಗೊಳ್ಳುವುದಿಲ್ಲ. ಆದ್ದರಿಂದ ಕಂಪನಿಗಳ (ಲೆಕ್ಕಪರಿಶೋಧಕರ ವರದಿ) ಆದೇಶ, 2016ರ ಷರತ್ತು 3(ix) ಕಂಪನಿಗೆ ಅನ್ವಯಗೊಳ್ಳುವುದಿಲ್ಲ.

XII. ನಮ್ಮ ಅಭಿಪ್ರಾಯದಲ್ಲಿ ಹಾಗೂ ನಮಗೆ ನೀಡಲಾದ ವಿವರಣೆಯಂತೆ, ಕಂಪನಿಯು ಒಂದು ನಿಧಿ ಕಂಪನಿ ಆಗಿರುವುದಿಲ್ಲ ಮತ್ತು ಆದ್ದರಿಂದ ಕಂಪನಿಗಳ (ಲೆಕ್ಕಪರಿಶೋಧಕರ ವರದಿ) ಆದೇಶ, 2016ರ ಷರತ್ತು 3(xii) ಕಂಪನಿಗೆ ಅನ್ವಯಗೊಳ್ಳುವುದಿಲ್ಲ.

XIII. ನಮಗೆ ಒದಗಿಸಲಾದ ಮಾಹಿತಿಯಂತೆ ನೀಡಲಾದ ವಿವರಣೆಗಳಂತೆ ಸಂಬಂಧಿತ ತಂಡಗಳೊಂದಿಗೆ ಎಲ್ಲಾ ವ್ಯವಹಾರಗಳು ಕಂಪನಿಗಳ ಅಧಿನಿಯಮ, 2013ರ ಪರಿಚ್ಛೇದಗಳು 177 ಮತ್ತು 188ರ ಅನುಸಾರ ಆಗಿರುತ್ತವೆ ಹಾಗೂ ಅನ್ವಯಗೊಳ್ಳುವ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಮಾನದಂಡಗಳ ಅನುಸಾರ ಈ ನಿಟ್ಟಿನಲ್ಲಿ ವಿವರಗಳನ್ನು ಹಣಕಾಸು ತ:ಖ್ತೆಗಳು, ಇತ್ಯಾದಿಗಳಲ್ಲಿ ಬಹಿರಂಗಪಡಿಸಲಾಗಿರುತ್ತದೆ.

XIV. ನಮಗೆ ನೀಡಲಾದ ಮಾಹಿತಿಯಂತೆ ಹಾಗೂ ವಿವರಣೆಯಂತೆ ಹಾಗೂ ನಾವು ನಡೆಸಿದ ದಾಖಲೆಗಳ ಪರಿಶೀಲನೆಯಲ್ಲಿ ಕಂಡುಬಂದಂತೆ, ಕಂಪನಿಯು ಷೇರುಗಳನ್ನು ಅಥವಾ ಸಂಪೂರ್ಣವಾಗಿ ಅಥವಾ ಭಾಗಶ: ಪರಿವರ್ತಿಸಬಹುದಾದ ಡಿಬೆಂಚರುಗಳನ್ನು ಪ್ರಸಕ್ತ ಸಾಲಿನಲ್ಲಿ ಯಾವುದೇ ಆಧ್ಯತೆಯ ಹಂಚಿಕೆಯನ್ನು ಅಥವಾ ಖಾಸಗಿ ಹೂಡಿಕೆಯನ್ನು ಮಾಡಿರುವುದಿಲ್ಲ. ಆದ್ದರಿಂದ ಕಂಪನಿಗಳ (ಲೆಕ್ಕಪರಿಶೋಧಕರ ವರದಿ) ಆದೇಶ, 2016ರ ಷರತ್ತು 3(xiv) ಕಂಪನಿಗೆ ಅನ್ವಯಗೊಳ್ಳುವುದಿಲ್ಲ.

XV. ನಮಗೆ ನೀಡಲಾದ ಮಾಹಿತಿಯಂತೆ ಹಾಗೂ ವಿವರಣೆಯಂತೆ ಹಾಗೂ ನಾವು ನಡೆಸಿದ ದಾಖಲೆಗಳ ಪರಿಶೀಲನೆಯಲ್ಲಿ ಕಂಡುಬಂದಂತೆ, ಕಂಪನಿಯು ಅಧಿನಿಯಮದ ಪರಿಚ್ಛೇದ 192ರ ಅಡಿಯಲ್ಲಿ ನಿರ್ದೇಶಕರುಗಳು ಅಥವಾ ಅವರುಗಳ ಜೊತೆ ಸಂಬಂಧ ಹೊಂದಿರುವ ವ್ಯಕ್ತಿಗಳ ಜೊತೆಯಲ್ಲಿ ನಗದೇತರ ವ್ಯವಹಾರಗಳನ್ನು ಮಾಡಿರುವುದಿಲ್ಲ ಮತ್ತು ಆದ್ದರಿಂದ ಕಂಪನಿಗಳ (ಲೆಕ್ಕಪರಿಶೋಧಕರ ವರದಿ) ಆದೇಶ, 2016ರ ಷರತ್ತು 3(xv) ಕಂಪನಿಗೆ ಅನ್ವಯಗೊಳ್ಳುವುದಿಲ್ಲ.

XVI. ನಮ್ಮ ಅಭಿಪ್ರಾಯದಲ್ಲಿ ಕಂಪನಿಯು ರಿಸರ್ವ್ ಬ್ಯಾಂಕ್ ಅಧಿನಿಯಮ, 1934ರ ಪರಿಚ್ಛೇದ 45 IJ ಅಡಿಯಲ್ಲಿ ನೋಂದಣೀ ಮಾಡಿಸುವ ಅಗತ್ಯೆತೆಯು ಇರುವುದಿಲ್ಲ. ಆದ್ದರಿಂದ ಕಂಪನಿಗಳ (ಲೆಕ್ಕಪರಿಶೋಧಕರ ವರದಿ) ಆದೇಶ, 2016ರ ಷರತ್ತು 3(xvi) ಕಂಪನಿಗೆ ಅನ್ವಯಗೊಳ್ಳುವುದಿಲ್ಲ.

ಟಿ. ಶ್ರೀರಾಮ್, ಮೆಹ್ತಾ ಅಂಡ್ ತಡಿಮಲ್ಲ ಇವರುಗಳಿಗಾಗಿ
ಚಾರ್ಟರ್ಡ್ ಅಕೌಂಟೆಂಟ್ಸ್
ಸಂಸ್ಥೆಯ ನೋಂದಣಿ ಸಂಖ್ಯೆ 004064ಎಸ್

--ಸಹಿ ಮಾಡಲಾಗಿದೆ--
ಕವಿತಾ ಪಿ
ಪಾಲುದಾರರು
ಸದಸ್ಯತ್ವ ಸಂಖ್ಯೆ 217569

ಸ್ಥಳ: ಬೆಂಗಳೂರು
ದಿನಾಂಕ 29 ಅಕ್ಟೋಬರ್ 2018

ಸ್ವತಂತ್ರ ಲೆಕ್ಕಪರಿಶೋಧಕರುಗಳ ವರದಿಗೆ "ಅನುಬಂಧ ಬಿ"

31 ಮಾರ್ಚ್ 2018ಕ್ಕೆ ಅಂತ್ಯಗೊಂಡ ಸಾಲಿಗೆ ಕಂಪನಿಯ ಹಣಕಾಸು ತ:ಖ್ತೆಗಳಿಗೆ ನಮ್ಮ ಅದೇ ದಿನಾಂಕದ ವರದಿಯಲ್ಲಿ "ಇತರೆ ಕಾನೂನಾತ್ಮಕ ಮತ್ತು ನಿಯಂತ್ರಕ ಅಗತ್ಯತೆಗಳು" ಶೀರ್ಷಿಕೆಯ ಅಡಿಯಲ್ಲಿ ಕಂಡಿಕೆ 1ರಲ್ಲಿ ಉಲ್ಲೇಖಿಸಲಾಗಿರುವಂತೆ.

ಕಂಪನಿಗಳ ಅಧಿನಿಯಮ, 2013ರ (ಅಧಿನಿಯಮ) ಪರಿಚ್ಛೇದ 143ರ ಉಪ–ಪರಿಚ್ಛೇದ 3ರ ಷರತ್ತು (i)ರ ಅಡಿಯಲ್ಲಿ ಆಂತರಿಕ ಹಣಕಾಸು ನಿಯಂತ್ರಣಗಳ ಮೇಲಿನ ವರದಿ.

ನಾವು ಜಂಗಲ್ ಲಾಡ್ಜಸ್ ಅಂಡ್ ರೆಸಾರ್ಟ್ಸ್ ಲಿಮಿಟೆಡ್‌ನ (ಕಂಪನಿ) 31 ಮಾರ್ಚ್ 2018ರಲ್ಲಿದ್ದಂತಹ ಹಣಕಾಸು ವರದಿಗಳ ಮೇಲೆ ಅದೇ ದಿನಾಂಕದಂದು ಅಂತ್ಯಗೊಂಡ ಸಾಲಿಗೆ ಕಂಪನಿಯ ಹಣಕಾಸು ತ:ಖ್ತೆಗಳ ಮೇಲೆ ನಮ್ಮ ಲೆಕ್ಕಪರಿಶೋಧನಾ ವರದಿಗೆ ಸೇರಿಕೊಂಡಿರುವಂತಹ ಒಂದು ಭಾಗವಾಗಿ ಆಂತರಿಕ ಹಣಕಾಸು ನಿಯಂತ್ರಣಗಳನ್ನು ಲೆಕ್ಕಪರಿಶೋಧನೆ ಮಾಡಿರುವೆವು.

1. ಆಂತರಿಕ ಹಣಕಾಸು ನಿಯಂತ್ರಣಗಳಿಗಾಗಿ ವ್ಯವಸ್ಥಾಪನೆಯ ಜವಾಬ್ದಾರಿ

ಭಾರತೀಯ ಚಾರ್ಟರ್ಡ್ ಅಕೌಂಟೆಂಟ್‌ಗಳ ಸಂಸ್ಥೆಯು ಹಣಕಾಸು ವರದಿಯ ಮೇಲೆ ಆಂತರಿಕ ಹಣಕಾಸು ನಿಯಂತ್ರಣಗಳಿಗೆ ಸಂಬಂಧಿಸಿದಂತೆ ಮಾರ್ಗಸೂಚಿ ಟಿಪ್ಪಣಿಯಲ್ಲಿ ತಿಳಿಸಿರುವ ಆಂತರಿಕ ನಿಯಂತ್ರಣದ ಅತ್ಯಗತ್ಯ ಭಾಗಗಳನ್ನು ಪರಿಗಣಿಸಿದಂತೆ ನಿಗಮದಿಂದ ಸ್ಥಾಪಿಸಲಾಗಿರುವ ಹಣಕಾಸು ವರದಿಯ ಮಾನದಂಡದ ಮೇಲೆ ಆಂತರಿಕ ನಿಯಂತ್ರಣವನ್ನು ಆಧರಿಸಿದಂತೆ ಆಂತರಿಕ ನಿಯಂತ್ರಣವನ್ನು ಸ್ಥಾಪಿಸುವುದು ಮತ್ತು ನಿರ್ವಹಿಸಿಕೊಂಡು ಹೋಗುವುದು ನಿಗಮದ ಆಡಳಿತ ಮಂಡಳಿಯ ಜವಾಬ್ದಾರಿಯಾಗಿರುತ್ತದೆ. ಈ ಜವಾಬ್ದಾರಿಗಳು, ನಿಗಮದ ಕಾರ್ಯನೀತಿಗಳಿಗೆ ಬದ್ಧತೆಯಿಂದ ಕೂಡಿರುವುದನ್ನೂ ಒಳಗೊಂಡಂತೆ ತನ್ನ ವ್ಯಾಪಾರವ್ಯವಹಾರವನ್ನು ನಿಯಮಗಳ ಅನುಸಾರ ಮತ್ತು ದಕ್ಷತೆಯಿಂದ ನಡೆಸುವುದನ್ನು ಖಚಿತಪಡಿಸಿಕೊಳ್ಳುವುದಕ್ಕಾಗಿ ಪರಿಣಾಮಕಾರಿತ್ವದಿಂದ ಕಾರ್ಯಚರಣೆಗೊಳ್ಳುತ್ತಿದ್ದ ಸಮರ್ಪಕವಾದಂತಹ ಆಂತರಿಕ ಹಣಕಾಸು ನಿಯಂತ್ರಣದ ವಿನ್ಯಾಸ, ಕಾರ್ಯಗತಗೊಳಿಸುವಿಕೆ ಮತ್ತು ನಿರ್ವಹಣೆ, ತನ್ನ ಆಸ್ತಿಗಳನ್ನು ಸಂರಕ್ಷಿಸುವುದು, ವಂಚನೆಗಳು ಮತ್ತು ತಪ್ಪುಗಳು ಸಂಭವಿಸುವುದನ್ನು ತಡೆಯುವುದು ಮತ್ತು ಅಂತಹ ಪ್ರಕರಣಗಳನ್ನು ಪತ್ತೆಹಚ್ಚುವುದು, ಲೆಕ್ಕವನ್ನಿಡುವಿಕೆಯ ದಾಖಲೆಗಳ ಯಥಾರ್ಥತೆ ಮತ್ತು ಪರಿಪೂರ್ಣತೆ ಹಾಗೂ ಕಂಪನಿಗಳ ಅಧಿನಿಯಮ, 2013ರ ಅಡಿಯಲ್ಲಿ ಅಗತ್ಯತೆಯಿರುವಂತೆ ವಿಶ್ವಸನೀಯತೆಯಿಂದ ಕೂಡಿದ ಹಣಕಾಸಿಗೆ ಸಂಬಂಧಿತ ಮಾಹಿತಿಯನ್ನು ಸಮಯೋಚಿತವಾಗಿ ತಯಾರಿಸುವುದು ಇತ್ಯಾದಿಗಳನ್ನು ಒಳಗೊಂಡಿರುತ್ತವೆ.

2. ಲೆಕ್ಕಪರಿಶೋಧಕರುಗಳ ಜವಾಬ್ದಾರಿ

ನಮ್ಮ ಲೆಕ್ಕಪರಿಶೋಧನೆಯ ಆಧಾರದ ಮೇರೆಗೆ ಈ ಹಣಕಾಸು ತ:ಖ್ತೆಗಳ ಮೇಲೆ ಒಂದು ಅಭಿಪ್ರಾಯವನ್ನು ವ್ಯಕ್ತಪಡಿಸುವುದು ನಮ್ಮ ಜವಾಬ್ದಾರಿಯಾಗಿರುತ್ತದೆ. ಅಧಿನಿಯಮದ ಅನುವುಗಳು, ಲೆಕ್ಕವನ್ನಿಡುವಿಕೆಯ ಹಾಗೂ ಲೆಕ್ಕಪರಿಶೋಧನೆಯ ಮಾನದಂಡಗಳು ಹಾಗೂ ಅಧಿನಿಯಮ ಹಾಗೂ ಅದರ ಅಡಿಯಲ್ಲಿ ರೂಪಿಸಲಾಗಿರುವ ನಿಯಮಗಳ ಅನುವುಗಳ ಅನುಸಾರ ಲೆಕ್ಕಪರಿಶೋಧನಾ ವರದಿಯಲ್ಲಿ ಸೇರಿಸಲು ಅಗತ್ಯವಿರುವ ವಿಷಯಗಳನ್ನು ನಾವು ಗಣನೆಗೆ ತೆಗೆದುಕೊಂಡಿರುವೆವು. ಕಂಪನಿಗಳ ಅಧಿನಿಯಮ 2013ರ ಪರಿಚ್ಛೇದ 143(10)ರ ಅಡಿಯಲ್ಲಿ

ನಿರ್ದಿಷ್ಟಪಡಿಸಲಾಗಿದೆ ಎಂಬುದಾಗಿ ಭಾವಿಸಲಾಗಿರುವ ಹಾಗೂ ಆಂತರಿಕ ಹಣಕಾಸು ನಿಯಂತ್ರಣಗಳಿಗೆ ಅನ್ವಯಗೊಳ್ಳುವ ಹಾಗೂ ಭಾರತೀಯ ಚಾರ್ಟರ್ಡ್ ಅಕೌಂಟೆಂಟ್‌ಗಳ ಸಂಸ್ಥೆಯಿಂದ ನೀಡಲ್ಪಟ್ಟಿರುವ ಲೆಕ್ಕಪರಿಶೋಧನಾ ಮಾನದಂಡಗಳ ಅನುಸಾರ ಆಂತರಿಕ ಹಣಕಾಸು ನಿಯಂತ್ರಣಗಳ ಲೆಕ್ಕಪರಿಶೋಧನೆಗೆ ಅನ್ವಯಗೊಳ್ಳುವಷ್ಟರ ಮಟ್ಟಿಗೆ, ನಾವು ನಮ್ಮ ಲೆಕ್ಕಪರಿಶೋಧನೆಯನ್ನು ನಡೆಸಿರುವೆವು. ನೈತಿಕತೆಯ ಅಗತ್ಯತೆಗಳನ್ನು ಅನುಸರಿಸುವುದನ್ನು ಹಾಗೂ ಹಣಕಾಸು ತ:ಖ್ತೆಗಳು ವಿಷಯಕ ತಪ್ಪು ಹೇಳಿಕೆಗಳಿಂದ ಮುಕ್ತವಾಗಿವೆಯೇ ಎಂಬುದರ ಬಗ್ಗೆ ನ್ಯಾಯಸಮ್ಮತ ಭರವಸೆಯನ್ನು ಪಡೆಯುವುದಕ್ಕಾಗಿ ಲೆಕ್ಕಪರಿಶೋಧನಾ ವಿಧಾನವನ್ನು ಪೂರ್ವಭಾವಿಯಾಗಿ ಯೋಜಿಸುವುದು ಹಾಗೂ ಅದನ್ನು ಕಾರ್ಯಗತಗೊಳಿಸುವ ಅಗತ್ಯತೆಯನ್ನು ಆ ಮಾನದಂಡಗಳು ಹೊಂದಿವೆ.

ಹಣಕಾಸು ವರದಿಯ ಮೇಲೆ ಆಂತರಿಕ ಹಣಕಾಸು ನಿಯಂತ್ರಣಗಳ ವ್ಯವಸ್ಥೆಯ ಸಮರ್ಪಕತೆ ಹಾಗೂ ಅವುಗಳ ಕಾರ್ಯಾಚರಣೆಯ ಪರಿಣಾಮಕಾರಿತ್ವದ ಬಗ್ಗೆ ಲೆಕ್ಕಪರಿಶೋಧನಾ ಸಾಕ್ಷ್ಯಾಧಾರಗಳನ್ನು ಪಡೆದುಕೊಳ್ಳುವುದಕ್ಕಾಗಿ ಕಾರ್ಯಾಚರಣೆಗಳನ್ನು ನಡೆಸುವುದನ್ನು ನಮ್ಮ ಲೆಕ್ಕಪರಿಶೋಧನೆಯು ಒಳಗೊಂಡಿರುತ್ತದೆ. ಹಣಕಾಸು ವರದಿಯ ಮೇಲೆ ಆಂತರಿಕ ಹಣಕಾಸು ನಿಯಂತ್ರಣದ ನಮ್ಮ ಲೆಕ್ಕಪರಿಶೋಧನೆಯು, ಹಣಕಾಸು ವರದಿಯ ಮೇಲೆ ಆಂತರಿಕ ನಿಯಂತ್ರಣಗಳನ್ನು ಅರ್ಥ ಮಾಡಿಕೊಳ್ಳುವುದು, ಇರಬಹುದಾದ ವಿಷಯಕ ದುರ್ಬಲತೆಯ ಸಂಭಾವ್ಯ ಅಪಾಯವನ್ನು ನಿರ್ಧಾರಣೆ ಮಾಡುವುದು ಹಾಗೂ ನಿರ್ಧಾರಣೆ ಮಾಡಲಾದ ಸಂಭಾವ್ಯ ಅಪಾಯದ ಆಧಾರದ ಮೇರೆಗೆ ಆಂತರಿಕ ನಿಯಂತ್ರಣದ ವಿನ್ಯಾಸ ಮತ್ತು ಕಾರ್ಯಾಚರಣೆಯ ಪರಿಣಾಮಕಾರಿತ್ವವನ್ನು ಮೌಲ್ಯಮಾಪನ ಮಾಡುವುದನ್ನು ಒಳಗೊಂಡಿದೆ. ಆಯ್ಕೆಮಾಡಿಕೊಳ್ಳಲಾದ ಕಾರ್ಯವಿಧಾನವು ಹಣಕಾಸು ತ:ಖ್ತೆಗಳಲ್ಲಿನ ವಂಚನೆಗಳ ಕಾರಣವಾಗಿರಲಿ ಅಥವಾ ತಪ್ಪುಗಳನ್ನು ಎಸಗುವ ಕಾರಣಗಳಿಂದಾಗಿರಲೀ ವಿಷಯಕ ತಪ್ಪು ಹೇಳಿಕೆಗಳ ಸಂಭಾವ್ಯ ಅಪಾಯವನ್ನು ನಿರ್ಧಾರಣೆ ಮಾಡುವುದನ್ನೂ ಒಳಗೊಂಡಂತೆ ಲೆಕ್ಕಪರಿಶೋಧಕರ ತೀರ್ಮಾನವನ್ನು ಅವಲಂಭಿಸಿರುತ್ತದೆ. ನಾವು ಪಡೆದುಕೊಂಡಂತಹ ಲೆಕ್ಕಪರಿಶೋಧನಾ ಸಾಕ್ಷ್ಯಾಧಾರಗಳು ನಿಗಮದ ಆಂತರಿಕ ಹಣಕಾಸು ನಿಯಂತ್ರಣ ವ್ಯವಸ್ಥೆಯ ಮೇಲೆ ನಮ್ಮ ಲೆಕ್ಕಪರಿಶೋಧನಾ ಅಭಿಪ್ರಾಯಗಳನ್ನು ವ್ಯಕ್ತಪಡಿಸುವ ದೃಷ್ಟಿಯಿಂದ ಒಂದು ಆಧಾರವನ್ನು ಒದಗಿಸುವುದಕ್ಕಾಗಿ ಸಮರ್ಪಕವಾಗಿವೆ ಹಾಗೂ ಸೂಕ್ತವಾಗಿವೆ ಎಂಬ ವಿಶ್ವಾಸವು ನಮಗಿದೆ.

3. ಹಣಕಾಸು ವರದಿಯ ಮೇಲೆ ಆಂತರಿಕ ಹಣಕಾಸು ನಿಯಂತ್ರಣಗಳ ತಾತ್ಪರ್ಯ/ಪ್ರಾಮುಖ್ಯತೆ

ಒಂದು ಕಂಪನಿಯ ಹಣಕಾಸು ವರದಿಯ ಮೇಲೆ ಆಂತರಿಕ ಹಣಕಾಸು ನಿಯಂತ್ರಣವು ಹಣಕಾಸು ವರದಿಯ ವಿಶ್ವಸನೀಯತೆಯ ಬಗ್ಗೆ ಹಾಗೂ ಒಂದು ನ್ಯಾಯಸಮ್ಮತ ಭರವಸೆಯನ್ನು ಒದಗಿಸುವ ಸಲುವಾಗಿನ ಹಾಗೂ ಸರ್ವೇಸಾಮಾನ್ಯವಾಗಿ ಒಪ್ಪಿಕೊಳ್ಳಲಾಗಿರುವ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ತತ್ವಗಳ ಅನುಸಾರ ಬಾಹ್ಯ ಉದ್ದೇಶಗಳಿಗಾಗಿ ಹಣಕಾಸು ತ:ಖ್ತೆಗಳ ತಯಾರಿಕೆಯ ಬಗ್ಗೆ ಒಂದು ನ್ಯಾಯಸಮ್ಮತ ಭರವಸೆಯನ್ನು ಒದಗಿಸುವುದಕ್ಕಾಗಿ ರೂಪಿಸಲಾದ ಪ್ರಕ್ರಿಯೆಯಾಗಿರುತ್ತದೆ. ಹಣಕಾಸು ವರದಿಯ ಮೇಲೆ ಒಂದು ನಿಗಮದ ಆಂತರಿಕ ಹಣಕಾಸು ನಿಯಂತ್ರಣವು, (1) ಕಂಪನಿಯ ಆಸ್ತಿಗಳ ವ್ಯವಹಾರಗಳು ಮತ್ತು ವಿನ್ಯಾಸ/ವ್ಯವಸ್ಥೆಯನ್ನು ನ್ಯಾಯಸಮ್ಮತವಾದಂತಹ ಮತ್ತು ಯಥಾರ್ಥತೆಯಿಂದ ಕೂಡಿದ ರೀತಿಯಲ್ಲಿ ತೋರಿಸುವುದು (2) ಸರ್ವೇಸಾಮಾನ್ಯವಾಗಿ ಒಪ್ಪಿಕೊಳ್ಳಲಾಗಿರುವಂತಹ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ತತ್ವಗಳ ಅನುಸಾರ ಪ್ರತ್ಯೇಕ ಹಣಕಾಸು ತ:ಖ್ತೆಗಳನ್ನು ತಯಾರಿಸುವಲ್ಲಿ ಅನುಮತಿ ನೀಡುವ ಸಲುವಾಗಿ ಅಗತ್ಯವಿರುವಂತೆ ವ್ಯವಹಾರಗಳನ್ನು ದಾಖಲಿಸಲಾಗಿದೆ ಹಾಗೂ ಕಂಪನಿಯ ಸ್ವೀಕೃತಿಗಳು ಮತ್ತು ವೆಚ್ಚಗಳನ್ನು ನಿಗಮದ ವ್ಯವಸ್ಥಾಪನೆ/ಆಡಳಿತ ಮಂಡಳಿಯ ಮತ್ತು ನಿರ್ದೇಶಕರುಗಳ ಅನುಮತಿಯ ಅನುಸಾರವೇ ಮಾಡಲಾಗಿದೆ ಎಂಬುದರ ಬಗ್ಗೆ ಒಂದು ನ್ಯಾಯಸಮ್ಮತ ಭರವಸೆಯನ್ನು ಒದಗಿಸುವುದು (3) ಪ್ರತ್ಯೇಕ ಹಣಕಾಸು ತ:ಖ್ತೆಗಳ ಮೇಲೆ ಒಂದು ವಿಷಯಕ ಪ್ರಭಾವವನ್ನು ಹೊಂದಿರುವಂತಹ ನಿಗಮದ ಆಸ್ತಿಗಳ ಅನಧಿಕೃತ ಸ್ವಾಧೀನತೆ, ಬಳಕೆ ಅಥವಾ ವಿಲೆವಾರಿಯನ್ನು ತಡೆಯುವುದು ಅಥವಾ ಸಮಯೋಚಿತವಾಗಿ ಪತ್ತೆಹಚ್ಚುವುದು ಇವುಗಳನ್ನು ಒಳಗೊಂಡಿರುತ್ತದೆ.

4. ಹಣಕಾಸು ವರದಿಯ ಮೇಲೆ ಆಂತರಿಕ ಹಣಕಾಸು ನಿಯಂತ್ರಣಗಳ ಅಂತರ್ಗತ ಇತಿಮಿತಿಗಳು

ವಂಚನೆ/ಒಳಸಂಚಿನ ಸಂಭಾವ್ಯತೆ ಅಥವಾ ಆಮರ್ಪಕವಾದಂತಹ ಆಡಳಿತವು ನಿಯಂತ್ರಣಗಳನ್ನು ಕಡೆಗಣಿಸುವುದು, ಇವುಗಳನ್ನೂ ಒಳಗೊಂಡಂತೆ ಹಣಕಾಸು ವರದಿಯ ಮೇಲೆ ಆಂತರಿಕ ಹಣಕಾಸು ನಿಯಂತ್ರಣಗಳ ಅಂತರ್ಗತ ಇತಿಮಿತಿಗಳ ಕಾರಣ ವಿಷಯಕ ತಪ್ಪು ಹೇಳಿಕೆಗಳು ಅಥವಾ ವಂಚನೆಗಳು ಸಂಭವಿಸಬಹುದು ಹಾಗೂ ಅವುಗಳನ್ನು ಪತ್ತೆ ಹಚ್ಚಲು ಸಾಧ್ಯವಾಗದಿರಬಹುದು. ಭವಿಷ್ಯದ ಅವಧಿಗಳಿಗೆ ಸಂಬಂಧಿತ ಹಣಕಾಸು ವರದಿಯ ಮೇಲೆ ಆಂತರಿಕ ಹಣಕಾಸು ನಿಯಂತ್ರಣಗಳ ಯಾವುದೇ ಮೌಲ್ಯಮಾಪನವನ್ನು ಪ್ರಕ್ಷೇಪಿಸುವುದು ಹಣಕಾಸು ವರದಿಯ ಮೇಲೆ ಆಂತರಿಕ ಹಣಕಾಸು ನಿಯಂತ್ರಣವು ಸ್ಥಿತಿಗತಿಗಳಲ್ಲಿನ ಬದಲಾವಣೆ ಅಥವಾ ಕಾರ್ಯನೀತಿಗಳು ಅಥವಾ ಕಾರ್ಯವಿಧಾನಗಳು ಹಾಳಾಗುವುದರ ಕಾರಣ ಅಸಮರ್ಪಕಗೊಳ್ಳುವ ಸಂಭಾವ್ಯ ಅಪಾಯದ ಷರತ್ತಿಗೆ ಒಳಪಟ್ಟಿರುತ್ತದೆ.

5. ನಮ್ಮ ಅಭಿಪ್ರಾಯ

ನಮ್ಮ ಅಭಿಪ್ರಾಯದಲ್ಲಿ, 31 ಮಾರ್ಚ್ 2018ರಲ್ಲಿದ್ದಂತೆ ಕಂಪನಿಯ ಗಾತ್ರ ಹಾಗೂ ಅದರ ವ್ಯಾಪಾರವ್ಯವಹಾರಗಳ ಸ್ವರೂಪಕ್ಕೆ ತಕ್ಕಂತೆ, ಸರಕುಸಾಮಗ್ರಿಗಳ ಖರೀದಿ ಮತ್ತು ಮತ್ತು ಮಾರಾಟ, ಸ್ಥಿರಾಸ್ತಿಗಳು, ಸೇವೆಗಳ ಮಾರಾಟ ಮತ್ತು ನಗದು ಮತ್ತು ಸರಕುಸಾಮಗ್ರಿಗಳು ಮತ್ತು ಆಸ್ತಿಗಳ ಸಾಗಣೆ/ರವಾನೆಗಳು ಮುಂತಾದ ಇತರೆ ಕ್ಷೇತ್ರಗಳನ್ನು ಗಮನದಲ್ಲಿಟ್ಟುಕೊಂಡು ಭಾರತೀಯ ಚಾರ್ಟರ್ಡ್ ಅಕೌಂಟೆಂಟ್‌ಗಳ ಸಂಸ್ಥೆಯಿಂದ ನೀಡಲ್ಪಟ್ಟಿರುವ ಹಣಕಾಸು ವರದಿಯ ಮೇಲೆ ಆಂತರಿಕ ಹಣಕಾಸು ನಿಯಂತ್ರಣಗಳ ಲೆಕ್ಕಪರಿಶೋಧನೆಯ ಮೇಲೆ ಮಾರ್ಗಸೂಚಿ ಟಿಪ್ಪಣಿಯಲ್ಲಿ ತಿಳಿಸಿರುವ ರೀತಿಯಲ್ಲಿ ಆಂತರಿಕ ನಿಯಂತ್ರಣಗಳ ಅತ್ಯಗತ್ಯ ಭಾಗಗಳನ್ನು ಪರಿಗಣಿಸಿದಂತೆ ಕಂಪನಿಯಿಂದ ಸ್ಥಾಪಿಸಲ್ಪಟ್ಟಿರುವ ಹಣಕಾಸು ವರದಿಯ ಮೇಲೆ ಆಂತರಿಕ ಹಣಕಾಸು ನಿಯಂತ್ರಣದ ಮಾನದಂಡಗಳ ಆಧಾರದ ಮೇರೆಗೆ ಹಣಕಾಸು ವರದಿಯ ಮೇಲೆ ಒಂದು ಸಮರ್ಪಕ ಆಂತರಿಕ ಹಣಕಾಸು ನಿಯಂತ್ರಣಗಳ ವ್ಯವಸ್ಥೆಯನ್ನು ಬಲಪಡಿಸುವ ಅಗತ್ಯತೆಯಿರುತ್ತದೆ.

ಟಿ. ಶ್ರೀರಾಮ್, ಮೆಹ್ತಾ ಅಂಡ್ ತಡಿಮಲ್ಲ ಇವರುಗಳಿಗಾಗಿ
ಚಾರ್ಟರ್ಡ್ ಅಕೌಂಟೆಂಟ್ಸ್
ಸಂಸ್ಥೆಯ ನೋಂದಣಿ ಸಂಖ್ಯೆ 004064ಎಸ್

--ಸಹಿ ಮಾಡಲಾಗಿದೆ--
ಕವಿತಾ ಪಿ
ಪಾಲುದಾರರು
ಸದಸ್ಯತ್ವ ಸಂಖ್ಯೆ 217569

ಸ್ಥಳ : ಬೆಂಗಳೂರು
ದಿನಾಂಕ 29 ಅಕ್ಟೋಬರ್ 2018

ಅನುಬಂಧ – ಸಿ

ಬಾಕಿಯಿರುವ ಕಾನೂನಾತ್ಮಕ/ಪಂಚಾಯಿತಿದಾರಿಕೆ ಪ್ರಕರಣಗಳ ವಿವರಗಳು

1. ಸೇವಾ ತೆರಿಗೆ ವಿಷಯಗಳು

i. ಕಾರಣಗಳನ್ನು ಕೇಳಿ ಸೇವಾ ತೆರಿಗೆ ಇಲಾಖೆಯು ನೀಡಿದ್ದ ನೋಟೀಸಿಗೆ ಪ್ರತಿಕ್ರಿಯೆ ನೀಡಿ ರೂ.31,58,957/–ರಷ್ಟು ಮೊತ್ತವನ್ನು ಕಂಪನಿಯು ಪ್ರತಿಭಟನೆಯೊಂದಿಗೆ ಠೇವಣಿಯಿಟ್ಟಿತು. ಸೇವಾ ತೆರಿಗೆ ಮನವಿ ಅಧಿಕಾರಿಗಳ ಮುಂದೆ ಒಂದು ಮನವಿಯು ಬಾಕಿಯಿರುವುದು. ಈ ನಿಟ್ಟಿನಲ್ಲಿ ನಿರ್ಣಯವು ಬಾಕಿಯಿರುವುದರಿಂದ ಜವಾಬ್ದಾರಿಗಾಗಿ ಯಾವುದೇ ಅನುವನ್ನೂ ಮಾಡಿರುವುದಿಲ್ಲ.

ii. ಗೌರವಾನ್ವಿತ ಆಯುಕ್ತರು, ಸೇವಾ ತೆರಿಗೆ, ಬೆಂಗಳೂರು, ಇವರು ಸಂಖ್ಯೆ IV/16/227/2010 ಎಸ್‌ಟಿ ಎಡಿಜೆಎನ್.6164/11 ದಿನಾಂಕ 26 ಸೆಪ್ಟಂಬರ್ 2011ರ ಮೂಲಕ ಸೇವಾ ತೆರಿಗೆ ಅಧಿನಿಯಮದ ಪರಿಚ್ಛೇದ 73(1)ರ ಜೊತೆಯಲ್ಲಿ ಓದಲ್ಪಡುವ ಪರಿಚ್ಛೇದ 73(2)ರ ಅಡಿಯಲ್ಲಿ, ಜಂಗಲ್ ಲಾಡ್ಜಸ್ ಅಂಡ್ ರೆಸಾರ್ಟ್ಸ್ ಕಂಪನಿಯನ್ನು ಒಂದು ಪ್ರವಾಸ, ಸ್ಥಿರಾಸ್ತಿಗಳನ್ನು ಬಾಡಿಗೆಗೆ ಕೊಡುವ ವಾಣಿಜ್ಯ ತರಬೇತಿ ಹಾಗೂ ಶೈಕ್ಷಣಿಕ ಸೇವೆಗಳನ್ನು ಒದಗಿಸುತ್ತಿರುವ ಒಂದು ಕಂಪನಿಯೆಂಬುದಾಗಿ ಖಚಿತಪಡಿಸಿ ಒಂದು ಆದೇಶವನ್ನು ಜಾರಿಗೊಳಿಸಿದರು. ಆ ಆದೇಶದ ಪ್ರಕಾರ, 1 ಏಪ್ರಿಲ್ 2005 ರಿಂದ 31 ಮಾರ್ಚ್ 2010 ರವರೆಗೆ ರೂ.5,11,74,871/–ರಷ್ಟು ಮೊತ್ತದ ಪಾವತಿಗಾಗಿ ತಗಾದೆ (ಡಿಮ್ಯಾಂಡ್) ಇದ್ದಿತು, ಅದಕ್ಕಾಗಿ ಕಂಪನಿಯು ಸೀಮಾ ಶುಲ್ಕ, ಸುಂಕ ಹಾಗೂ ಸೇವಾ ತೆರಿಗೆ ನ್ಯಾಯಿಕ ಪ್ರಾಧಿಕಾರ, ದಕ್ಷಿಣ ವಲಯ ಬೆಂಚಿನ ಮುಂದೆ ಒಂದು ಮನವಿಯನ್ನು ಸಲ್ಲಿಸಿದೆ.

iii. ನ್ಯಾಯಿಕ ಪ್ರಾಧಿಕಾರವು, ತನ್ನ ಎಂಐಎಸ್‌ಸಿ.ಆದೇಶ ಸಂಖ್ಯೆ 20656–20657/2014 ದಿನಾಂಕ 11 ಮಾರ್ಚ್ 2014ರ ಮೂಲಕ ಮನವಿಯು ಬಾಕಿ ಇರುವ ಸಮಯದಲ್ಲಿ ಮೇಲೆ ತಿಳಿಸಲಾದ ತೆರಿಗೆ ಬಾಧ್ಯತೆಯ ವಸೂಲಾತಿಯ ಪ್ರತಿಯಾಗಿ ತಡೆಯಾಜ್ಞೆಯನ್ನು ನೀಡಿರುವುದು. ತತ್ಪರಿಣಾಮವಾಗಿ, ಯಾವುದೇ ಅನುವನ್ನೂ ಲೆಕ್ಕಪತ್ರಗಳಲ್ಲಿ ಮಾಡಿರುವುದಿಲ್ಲ.

2. ಆದಾಯ ತೆರಿಗೆಗೆ ಸಂಬಂಧಿತ ವಿಷಯಗಳು

i .2009–10 ಕರನಿರ್ಧಾರಣಾ ವರ್ಷಕ್ಕೆ, ಗೌರವಾನ್ವಿತ ಆಯುಕ್ತರು, ಆದಾಯ ತೆರಿಗೆ – I, ಬೆಂಗಳೂರು, ಇವರು ಆದಾಯ ತೆರಿಗೆ ಅಧಿನಿಯಮದ ಪರಿಚ್ಛೇದ 263ರ ಅಡಿಯಲ್ಲಿ, ಹೂಡಿಕೆಗಳ ಮೌಲ್ಯದಲ್ಲಿನ ಇಳಿಮೆಗೆ ಸಂಬಂಧಿಸಿದಂತೆ ರೂ.71,82,692/– ಹಾಗೂ ರೂ.7,87,588/–ರಷ್ಟು ಮೊತ್ತಗಳ ಮುಂದೂಡಲ್ಪಟ್ಟಿರುವ ಬಂಡವಾಳ ವೆಚ್ಚವನ್ನು ತಿರಸ್ಕರಿಸುವಂತೆ ನಿರ್ದೇಶಿಸಿ ಒಂದು ಆದೇಶವನ್ನು ಜಾರಿಗೊಳಿಸಿದರು. ಅದರಂತೆಯೇ, ಆದಾಯ ತೆರಿಗೆಯ ಉಪ–ಆಯುಕ್ತರು ಪರಿಚ್ಛೇದ 263ರ ಅಡಿಯಲ್ಲಿ ಕರನಿರ್ಧಾರಣೆಯನ್ನು ಪೂರ್ಣಗೊಳಿಸಿದರು ಹಾಗೂ ಪಾವತಿಸಬೇಕಾಗಿದ್ದ ರೂ.62,40,214/–ರಷ್ಟು ಮೊತ್ತದ ತೆರಿಗೆ ಬಾಧ್ಯತೆಯನ್ನು ಪಾವತಿಸುವಂತೆ ಒತ್ತಾಯಿಸಿ ತಗಾದೆಯನ್ನು ಸೃಷ್ಟಿಸಿದರು. ಕರನಿರ್ಧಾರಣೆಯಿಂದ ಮನನೊಂದು, ಮನವಿಗಳ ಗೌರವಾನ್ವಿತ ಆಯುಕ್ತರ ಮುಂದೆ ಒಂದು ಮನವಿಯನ್ನು ಸಲ್ಲಿಸಿದರು. ಆದಾಯ ತೆರಿಗೆ ಮನವಿ ಪ್ರಾಧಿಕಾರವು ಕಡತವನ್ನು ಮನವಿಯನ್ನು

ಪುನರ್–ಪರಿಗಣಿಸುವಂತೆ ನಿರ್ದೇಶಿಸಿ ಕರನಿರ್ಧಾರಣಾ ಅಧಿಕಾರಿಯವರಿಗೆ ಹಿಂತಿರುಗಿಸಿತು. ಈ ವಿಷಯವು ಕರನಿರ್ಧಾರಣಾ ಅಧಿಕಾರಿಯವರ ಮುಂದೆ ಬಾಕಿಯಿರುವುದು. ಮುಂದುವರೆದು, ಪರಿಚ್ಛೇದ 263ರ ಜೊತೆಯಲ್ಲಿ ಓದಲ್ಪಡುವ ಪರಿಚ್ಛೇದ 143(3)ರ ಅಡಿಯಲ್ಲಿನ ಆದೇಶದ ಪ್ರತಿಯಾಗಿ ಆದಾಯ ತೆರಿಗೆ ಆಯುಕ್ತರು (ಮನವಿಗಳು), ಇವರ ಮುಂದೆ ಕಂಪನಿಯು ಒಂದು ಮನವಿಯನ್ನು ಸಲ್ಲಿಸಿತು. ಆದಾಯ ತೆರಿಗೆ ಆಯುಕ್ತರು (ಮನವಿಗಳು) ಈ ವಿಷಯವನ್ನು ಗಮನಿಸುವಂತೆ ಹಾಗೂ ಆದೇಶವನ್ನು ಜಾರಿಗೊಳಿಸುವಂತೆ ನಿರ್ದೇಶಿಸಿ 29–06–2018ರಂದು ಒಂದು ಆದೇಶವನ್ನು ಜಾರಿಗೊಳಿಸಿದರು. ಈ ವಿಷಯವನ್ನು ಮುಕ್ತಾಯಗೊಳಿಸಬೇಕೆಂಬುದಾಗಿ ಕಂಪನಿಯು ಕರನಿರ್ಧಾರಣಾ ಆಧಿಕಾರಿಯವರನ್ನು ಕೋರಿರುವುದು.

ii. 2011–12 ಸಾಲಿಗೆ ಕರನಿರ್ಧಾರಣಾ ಅಧಿಕಾರಿಯವರು ರೂ.28,32,689/–ರಷ್ಟು ಮೊತ್ತದ ತೆರಿಗೆ ಪಾವತಿಗಾಗಿ ತಗಾದೆ ನೋಟೀಸನ್ನು/ಆದೇಶವನ್ನು ನೀಡಿದ್ದರು. ಈ ಆದೇಶಕ್ಕೆ ಪ್ರತಿಯಾಗಿ ಕಂಪನಿಯು ಆದಾಯ ತೆರಿಗೆ ಆಯುಕ್ತರು (ಮನವಿಗಳು)–4, ಇವರ ಮುಂದೆ ಒಂದು ಮನವಿಯನ್ನು ಸಲ್ಲಿಸಿತು. ಆದಾಯ ತೆರಿಗೆ ಆಯುಕ್ತರು ಪರಿಚ್ಛೇದ 14ಎ ಅಡಿಯಲ್ಲಿ ರೂ.16,843/–ರಷ್ಟು ಮೊತ್ತದ ಒಂದು ಸಣ್ಣ ಸೇರ್ಪಡೆಯನ್ನು ಮಾಡುವುದನ್ನು ಹೊರತುಪಡಿಸಿ, ಮನವಿಯನ್ನು ಪುರಸ್ಕರಿಸಿ 29.06.2018ರಂದು ಆದೇಶವನ್ನು ಜಾರಿಗೊಳಿಸಿದರು. ಈ ವಿಷಯವನ್ನು ಮುಕ್ತಾಯಗೊಳಿಸಬೇಕೆಂಬುದಾಗಿ ಕಂಪನಿಯು ಕರನಿರ್ಧಾರಣಾ ಆಧಿಕಾರಿಯವರನ್ನು ಕೋರಿರುವುದು.

iii. 2012–13 ಕರನಿರ್ಧಾರಣಾ ಸಾಲಿಗೆ ಕರನಿರ್ಧಾರಣಾ ಅಧಿಕಾರಿಯವರು ರೂ.18,82,392/–ರಷ್ಟು ಮೊತ್ತದ ತೆರಿಗೆ ಪಾವತಿಗಾಗಿ ತಗಾದೆ ನೋಟೀಸನ್ನು/ಆದೇಶವನ್ನು ನೀಡಿದ್ದರು. ಈ ಆದೇಶಕ್ಕೆ ಪ್ರತಿಯಾಗಿ ಕಂಪನಿಯು ಆದಾಯ ತೆರಿಗೆ ಆಯುಕ್ತರು (ಮನವಿಗಳು)–4, ಇವರ ಮುಂದೆ ಒಂದು ಮನವಿಯನ್ನು ಸಲ್ಲಿಸಿತು. ಆದಾಯ ತೆರಿಗೆ ಆಯುಕ್ತರು ಮನವಿಯನ್ನು ಪುರಸ್ಕರಿಸಿ 29.06.2018ರಂದು ಆದೇಶವನ್ನು ಜಾರಿಗೊಳಿಸಿದರು. ಈ ವಿಷಯವನ್ನು ಮುಕ್ತಾಯಗೊಳಿಸಬೇಕೆಂಬುದಾಗಿ ಕಂಪನಿಯು ಕರನಿರ್ಧಾರಣಾ ಆಧಿಕಾರಿಯವರನ್ನು ಕೋರಿರುವುದು.

iv. 2013–14 ಕರನಿರ್ಧಾರಣಾ ಸಾಲಿಗೆ ಕರನಿರ್ಧಾರಣಾ ಅಧಿಕಾರಿಯವರು ರೂ.33,98,298/–ರಷ್ಟು ಮೊತ್ತದ ತೆರಿಗೆ ಪಾವತಿಗಾಗಿ ತಗಾದೆ ನೋಟೀಸನ್ನು/ಆದೇಶವನ್ನು ನೀಡಿದ್ದರು. ಈ ಆದೇಶಕ್ಕೆ ಪ್ರತಿಯಾಗಿ ಕಂಪನಿಯು ಆದಾಯ ತೆರಿಗೆ ಆಯುಕ್ತರು (ಮನವಿಗಳು)–4, ಮುಂದೆ ಒಂದು ಮನವಿಯನ್ನು ಸಲ್ಲಿಸಿತು. ಆದಾಯ ತೆರಿಗೆ ಆಯುಕ್ತರು ಮನವಿಯನ್ನು ಪುರಸ್ಕರಿಸಿ 29.06.2018ರಂದು ಆದೇಶವನ್ನು ಜಾರಿಗೊಳಿಸಿದರು. ಈ ವಿಷಯವನ್ನು ಮುಕ್ತಾಯಗೊಳಿಸಬೇಕೆಂಬುದಾಗಿ ಕಂಪನಿಯು ಕರನಿರ್ಧಾರಣಾ ಆಧಿಕಾರಿಯವರನ್ನು ಕೋರಿರುವುದು.

v. 2014–15 ಕರನಿರ್ಧಾರಣಾ ಸಾಲಿಗೆ ಕರನಿರ್ಧಾರಣಾ ಅಧಿಕಾರಿಯವರು ರೂ.7,93,970/–ರಷ್ಟು ಮೊತ್ತದ ತೆರಿಗೆ ಪಾವತಿಗಾಗಿ ತಗಾದೆ ನೋಟೀಸನ್ನು/ಆದೇಶವನ್ನು ನೀಡಿದ್ದರು. ಈ ಆದೇಶಕ್ಕೆ ಪ್ರತಿಯಾಗಿ ಕಂಪನಿಯು ಆದಾಯ ತೆರಿಗೆ ಆಯುಕ್ತರು (ಮನವಿಗಳು)–4, ಮುಂದೆ ಒಂದು ಮನವಿಯನ್ನು ಸಲ್ಲಿಸಿತು. ಆದಾಯ ತೆರಿಗೆ ಆಯುಕ್ತರು ಮನವಿಯನ್ನು ಪುರಸ್ಕರಿಸಿ 29.06.2018ರಂದು ಆದೇಶವನ್ನು ಜಾರಿಗೊಳಿಸಿದರು. ಈ ವಿಷಯವನ್ನು ಮುಕ್ತಾಯಗೊಳಿಸಬೇಕೆಂಬುದಾಗಿ ಕಂಪನಿಯು ಕರನಿರ್ಧಾರಣಾ ಆಧಿಕಾರಿಯವರನ್ನು ಕೋರಿರುವುದು.

vi. 2015–16 ಕರನಿರ್ಧಾರಣಾ ಸಾಲಿಗೆ ಕರನಿರ್ಧಾರಣಾ ಅಧಿಕಾರಿಯವರು ರೂ.10,33,830/–ರಷ್ಟು ಮೊತ್ತದ ತೆರಿಗೆ ಪಾವತಿಗಾಗಿ ತಗಾದೆ ನೋಟೀಸನ್ನು/ಆದೇಶವನ್ನು ನೀಡಿದ್ದರು. ಕರನಿರ್ಧಾರಣಾ ಅಧಿಕಾರಿಯವರ ಈ ಆದೇಶಕ್ಕೆ ಪ್ರತಿಯಾಗಿ ಕಂಪನಿಯು ಆದಾಯ ತೆರಿಗೆ ಆಯುಕ್ತರು (ಮನವಿಗಳು)–4, ಮುಂದೆ ಒಂದು ಮನವಿಯನ್ನು ಸಲ್ಲಿಸಿತು.

3. ಪೌರಾಡಳಿತ ತೆರಿಗೆ :

ಮೈಸೂರು ಮಹಾನಗರ ಪಾಲಿಕೆಯ ಸಹಾಯಕ ಕಂದಾಯ ಅಧಿಕಾರಿಯವರು ಮೈಸೂರಿನ ಹೋಟೆಲು ಮೆಟ್ರೋಪೋಲ್‌ನ 2002–03ರಿಂದ 2004–05 ಸಾಲುಗಳಿಗೆ ಕಟ್ಟಡ ತೆರಿಗೆ ಬಾಕಿಯ ಕಡೆಗೆ ರೂ.70,70,676/–ರಷ್ಟು ಮೊತ್ತದ ಬಾಕಿಗಳ ಪಾವತಿಗಾಗಿ 29.08.2016ರಂದು ನೀಡಲಾದ ತಗಾದೆ ನೋಟೀಸಿಗೆ ಪ್ರತಿಯಾಗಿ ರೂ.48,41,419/–ರಷ್ಟು ಮೊತ್ತವನ್ನು ಪಾವತಿಸಲಾಯಿತು. ಬಾಕಿ ಮೊತ್ತವು ರೂ.24,58,463/– ರಷ್ಟು ಪಾವತಿಸಬೇಕಿರುವ ಬಡ್ಡಿಯ ಕಡೆಗೆ ಆಗಿದ್ದು, ಮೈಸೂರು ಮಹಾನಗರ ಪಾಲಿಕೆಯ ಆಯುಕ್ತರವರಿಗೆ ಈ ಬಡ್ಡಿಯ ಮೊತ್ತವನ್ನು ಮನ್ನಾ ಮಾಡುವಂತೆ ಕೋರಲಾಗಿದೆ. ಆದ್ದರಿಂದ ಲೆಕ್ಕಪತ್ರಗಳಲ್ಲಿ ಅನುವು ಮಾಡಿರುವುದಿಲ್ಲ.

4. ಶಿವಮೊಗ್ಗ ಜಿಲ್ಲೆಯ ಸಾಗರ ತಾಲ್ಲೂಕಿನ ಜೋಗ ಜಲಪಾತದ ಹತ್ತಿರ ಇಳಕಳಲೆ ಗ್ರಾಮದಲ್ಲಿ ಪರಿಸರಸ್ನೇಹಿ ಪ್ರವಾಸೋದ್ಯಮ ತಾಣಗಳು/ಅನುಕೂಲತೆಗಳ ನಿರ್ಮಾಣಕ್ಕಾಗಿ ಗುತ್ತಿಗೆಯಿಂದ ಉದ್ಭವಿಸಿರುವ ವಿವಾದಗಳ ಮೇಲೆ ಮಧ್ಯಸ್ಥಿಕೆ/ಪಂಚಾಯಿತಿದಾರಿಕೆ.

ಎ. ಮೆ. ಮಂಜುಶ್ರೀ ಕನ್ಸ್‌ಟ್ರಕ್ಷನ್ ಲೋಕೋಪಯೋಗಿ ಇಲಾಖೆ ಗುತ್ತಿಗೆದಾರರು, ಬೆಂಗಳೂರು (ಹಕ್ಕುದಾರರು) ಹಾಗೂ ಮೆ. ಜಂಗಲ್ ಲಾಡ್ಜಸ್ ಅಂಡ್ ರೆಸಾರ್ಟ್ಸ್ (ಪ್ರತಿವಾದಿ), ಇವರ ನಡುವೆ, ಪಂಚಾಯಿತಿ ಮತ್ತು ಸಂಧಾನ ಅಧಿನಿಯಮ, 1996ರ ಅಡಿಯಲ್ಲಿ ಬೆಂಗಳೂರಿನಲ್ಲಿ ಪಂಚಾಯಿತಿದಾರಿಕೆ ತೀರ್ಪನ್ನು 21 ಫೆಬ್ರವರಿ 2014ರಂದು ನೀಡಲಾಯಿತು.

ಬಿ) ವೆಚ್ಚದಲ್ಲಿನ ಪರಿಷ್ಕರಣೆಯ ಕಾರಣ, ಕಾಮಗಾರಿಯ ವ್ಯಾಪ್ತಿಯಲ್ಲಿನ ಬದಲಾವಣೆಯ ಕಾರಣ, ಯೋಜನೆಯಲ್ಲಿ ಕಾಲಾವಧಿಗಿಂತ ಅಧಿಕವಾಗಿ ಉಳಿದಿದ್ದ ಕಾರಣ ಹೆಚ್ಚುವರಿ ಮೇಲು ಖರ್ಚುಗಳು, ರೂ.6,72,10,456/– ಮೊತ್ತದಷ್ಟು ಕೋರಿಕೆಗಳಿಗೆ ಪ್ರತಿಯಾಗಿ ರೂ.3,96,79,874/–ರಷ್ಟು ಮೊತ್ತದ ಲಾಭ ಮತ್ತು ಬಡ್ಡಿ ವೆಚ್ಚಗಳ ನಷ್ಟ, ಇವುಗಳ ಕಾರಣ ಹಕ್ಕುದಾರರ ಪರವಾಗಿ ತೀರ್ಪಿನ ಮೊತ್ತವನ್ನು ನೀಡಲಾಯಿತು.

ಸಿ) ರೂ.2,06,88,569/–ರಷ್ಟು ಮೊತ್ತಕ್ಕೆ ಪ್ರತಿವಾದಿಯಿಂದ ಮಾಡಲಾದ ಪ್ರತಿವಾದವನ್ನು ಏಕೈಕ ಮಧ್ಯಸ್ಥಿಕೆದಾರರು ತಿರಸ್ಕರಿಸಿದರು.

ಡಿ) ಮೂಲ ತೀರ್ಪಿನ ಆಧಾರದ ಮೇರೆಗೆ ಹಕ್ಕುದಾರರು 10 ಜುಲೈ 2010ರ ಮೂಲ ದಿನಾಂಕದ ನಂತರ ರೂ.1,55,44,246/–ರಷ್ಟು ಮೊತ್ತ ಹಾಗೂ ಅದರ ಮೇಲೆ ಬಡ್ಡಿ ರೂ.43,34,018/–ರ ಪರಿಷ್ಕೃತ ದರಕ್ಕೆ ಕಾನೂನಾತ್ಮಕವಾಗಿ ಅರ್ಹರಾಗಿರುವುದಾಗಿ ಮನವಿಯನ್ನು ಸಲ್ಲಿಸಿದರು.

ಇ) ಮೇಲಿನ ಕೋರಿಕೆಯ ಪ್ರತಿಯಾಗಿ ಮಧ್ಯಸ್ಥಿಕೆದಾರರು ರೂ.87,09,556/–ರಷ್ಟು ಮೊತ್ತಕ್ಕೆ ತೀರ್ಪನ್ನು ನೀಡಿದರು ಹಾಗೂ ರೂ.14,19,688/–ನ್ನು ಪರಿಷ್ಕೃತ ದರಗಳಿಗೆ ಹಾಗೂ ರೂ.14,19,688/–ರಷ್ಟು ಮೊತ್ತವನ್ನು ಬಡ್ಡಿಯ ಕಡೆಗೆ ನೀಡಿದರು, ಇವೆರಡೂ ಮೊತ್ತಗಳು ಸೇರಿದರೆ ಒಟ್ಟಾರೆ ರೂ.1,01,29,244/–ರಷ್ಟು ಆಗುತ್ತದೆ.

ಎಫ್) ಹಕ್ಕುದಾರರಿಗೆ ಪ್ರತಿವಾದಿಗಳು ಪಾವತಿಸಬೇಕಾದ ಒಟ್ಟಾರೆ ಬಾಧ್ಯತೆಗಳು ರೂ.4,98,09,118/–.

ಜಿ) ಪ್ರತಿವಾದಿಗಳ ನಿರ್ದೇಶಕರುಗಳ ಮಂಡಳಿಯು ಏಕೈಕ ಮಧ್ಯಸ್ಥಿಕೆದಾರರು ನೀಡಿದ್ದ ತೀರ್ಪನ್ನು ಪರಿಶೀಲಿಸುವುದಕ್ಕಾಗಿ ಒಂದು ಸಮಿತಿಯನ್ನು ರಚಿಸಿತು. ಅದರಂತೆಯೇ, ಪ್ರತಿವಾದಿಯು ಗೌರವಾನ್ವಿತ ಸಿವಿಲ್ ನ್ಯಾಯಾಲಯದಲ್ಲಿ ಎಫ್.ಆರ್. ಸಂಖ್ಯೆ 46/2014 ಎಎಸ್ ಸಂಖ್ಯೆ 44/2014 ದಿನಾಂಕ 06–05–2014 ರ ಮೂಲಕ ಒಂದು ಮನವಿಯನ್ನು ಸಲ್ಲಿಸಿದರು.

5. ಉದ್ಯೋಗಿಗಳ ರಾಜ್ಯ ವಿಮೆ ಪಾವತಿಸಬೇಕಾದ ನಷ್ಟ ಪರಿಹಾರಗಳು ಮತ್ತು ಬಡ್ಡಿ

ಉದ್ಯೋಗಿಗಳ ರಾಜ್ಯ ವಿಮಾ ನಿಗಮದ ಪ್ರಾದೇಶಿಕ ಆಯುಕ್ತರು ತಮ್ಮ ಆದೇಶ ಸಂಖ್ಯೆ 31.03.2015ರ ಮೂಲಕ ಏಪ್ರಿಲ್ 2009ರಿಂದ ಡಿಸೆಂಬರ್ 2014ರ ಅವಧಿಗೆ ಕಾಣಿಕೆಗಳ ಮೊತ್ತದ ಪಾವತಿಯನ್ನು (ಉದ್ಯೋಗಿಗಳು ಮತ್ತು ಉದ್ಯೋಗದಾತರು–ಎರಡೂ ಕಡೆಯಿಂದ) ವಿಳಂಬವಾಗಿ ಮಾಡಿದ್ದಕ್ಕಾಗಿ ಉದ್ಯೋಗಿಗಳ ರಾಜ್ಯ ವಿಮಾ ಅಧಿನಿಯಮದ ಪರಿಚ್ಛೇದ 85ಬಿ ಅಡಿಯಲ್ಲಿ ರೂ.5,95,557/–ರಷ್ಟು ಮೊತ್ತದ ನಷ್ಟಪರಿಹಾರ ಮೊತ್ತದ ಪಾವತಿಗಾಗಿ ತಗಾದೆಯನ್ನು ಸೃಷ್ಟಿಸಿದರು. ಮುಂದುವರೆದು, ತಮ್ಮ 10/07/2015ರ ಆದೇಶದ ಮೂಲಕ ಉದ್ಯೋಗಿಗಳ ರಾಜ್ಯ ವಿಮಾ ಅಧಿನಿಯಮದ ಪರಿಚ್ಛೇದ 39(5)ರ ಅಡಿಯಲ್ಲಿ ರೂ.3,10,754/–ರಷ್ಟು ಮೊತ್ತದ ಬಡ್ಡಿಯನ್ನು ಪಾವತಿಸುವಂತೆ ತಗಾದೆಯನ್ನು ಸೃಷ್ಟಿಸಿದ್ದರು. ಈ ಆದೇಶಗಳಿಂದ ಮನನೊಂದು ಯಾವುದೇ ನಷ್ಟಪರಿಹಾರಕ ಪಾವತಿಗಳನ್ನೂ ಹಾಗೂ ಅದರ ಮೇಲೆ ಬಡ್ಡಿಯನ್ನು ಮಾಡಬೇಕಿಲ್ಲ ಎಂಬುದಾಗಿ ಗೌರವಾನ್ವಿತ ಉದ್ಯೋಗಿಗಳ ರಾಜ್ಯ ವಿಮೆ (ಉರಾವಿ) ನಿಗಮದ ನ್ಯಾಯಾಲಯ, ಬೆಂಗಳೂರು, ಇದರ ಮುಂದೆ ಮನವಿಯನ್ನು ಸಲ್ಲಿಸಲಾಯಿತು. ಗೌರವಾನ್ವಿತ ಉರಾವಿ ನಿಗಮದ ನ್ಯಾಯಾಲಯವು ಮೇಲೆ ತಿಳಿಸಲಾದ ಪಾವತಿಗಾಗಿನ ತಗಾದೆಗೆ ಪ್ರತಿಯಾಗಿ ರೂ.2,50,000/–ರಷ್ಟು ಮೊತ್ತವನ್ನು ಪಾವತಿಸುವಂತೆ ಆದೇಶಿಸಿತು, ಆದ್ದರಿಂದ ಆ ಮೊತ್ತವನ್ನು , ಉರಾವಿ ನಿಗಮಕ್ಕೆ ಪಾವತಿಸಲಾಯಿತು.

ಉದ್ಯೋಗಿಗಳ ರಾಜ್ಯ ವಿಮಾ ನಿಗಮದ ಅಧಿಕಾರಿಗಳು ಎಂಎಫ್ಎ ಸಂಖ್ಯೆ 3056 ಮತು 3057ರ ಮೂಲಕ ಈ ವಿಷಯವನ್ನು ಕರ್ನಾಟಕದ ಉಚ್ಚ ನ್ಯಾಯಾಲಕ್ಕೆ ತೆಗೆದುಕೊಂಡು ಹೋದರು. ವಿಷಯವು ಉಚ್ಚ ನ್ಯಾಯಾಲಯದಲ್ಲಿ ಬಾಕಿಯಿರುವುದು.

6. 2011–12 ಸಾಲಿನಲ್ಲಿ ಭೀಮೇಶ್ವರಿ ಪ್ರಾಕೃತಿಕ ಕ್ಯಾಂಪಿನಲ್ಲಿ ಅಕೌಂಟೆಂಟ್‌ರವರು ರೂ.3,91,400/–ರಷ್ಟು ಮೊತ್ತವನ್ನು ದುರುಪಯೋಗಪಡಿಸಿಕೊಂಡಿದ್ದ ಪ್ರಕರಣವಿದ್ದಿತು..ರೂ.1,00,000/–ದಷ್ಟು ಮೊತ್ತವನ್ನು ಅವರಿಂದ ವಸೂಲಾತಿ ಮಾಡಲಾಯಿತು ಹಾಗೂ ಇತರೆ ವರಮಾನ ಎಂಬುದಾಗಿ ತೋರಿಸಲಾಯಿತು. ಬಾಕಿ ರೂ.2,91,400/–ರಷ್ಟು ಮೊತ್ತವನ್ನು ಬಡ್ಡಿಯ ಜೊತೆಯಲ್ಲಿ, ಘಟಕದ ಒಟ್ಟಾರೆ ಮೇಲ್ವಿಚಾರಣೆಗೆ ಜವಾಬ್ದಾರಿಯುತರಾಗಿದ್ದ ಘಟಕದ ವ್ಯವಸ್ಥಾಪಕರಿಂದ ವಸೂಲಾತಿ ಮಾಡಬೇಕಾಗಿದ್ದಿತು, ಅದರ ಪೈಕಿ ರೂ.2,04,000/–ರಷ್ಟನ್ನು ಅವರಿಂದ ವಸೂಲಾತಿ ಮಾಡಲಾಯಿತು. ಶ್ರೀ ಸುಂದರ್ ರಾಜ್, ಇವರು ವಸೂಲಾತಿಯ ತಡೆಯಾಜ್ಞೆಗಾಗಿ ಕರ್ನಾಟಕದ ಗೌರವಾನ್ವಿತ ಉಚ್ಚನ್ಯಾಯಾಲಯದಲ್ಲಿ ಮನವಿ ಸಂಖ್ಯೆ 4610/14ರ ಮೂಲಕ ಮನವಿಯನ್ನು ಸಲ್ಲಿಸಿದರು. ಕರ್ನಾಟಕದ ಉಚ್ಚ ನ್ಯಾಯಾಲಯವು ಶ್ರೀ ಸುಂದರ್ ರಾಜ್ ಇವರಿಂದ ವಸೂಲಾತಿ ಮಾಡಲಾಗಿರುವ ಮೊತ್ತವನ್ನು ಬಡ್ಡಿಯ ಜೊತೆಯಲ್ಲಿ ಅವರಿಗೆ ಮರುಪಾವತಿಸುವಂತೆ ಆದೇಶಿಸಿ ಸೆಪ್ಟಂಬರ್ 2017ರಲ್ಲಿ ರಿಟ್ ಮನವಿಯನ್ನು ವಿಲೆವಾರಿ ಮಾಡಿತು.

ನಿವೃತ್ತ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾದೀಶರಿಂದ ದಿನಾಂಕ 08.02.2017ರ ಸವಿವರ ತನಿಖೆಯು ಪೂರ್ಣಗೊಂಡಂತರ, ತನಿಖಾ ಅಧಿಕಾರಿಯವರು ತಮ್ಮ 13.09–2017ರ ವರದಿಯ ಮೂಲಕ ಶ್ರೀ ಸುಂದರ ರಾಜ್, ನಿವಾಸಿ ವ್ಯವಸ್ಥಾಪಕರು, ಇವರನ್ನು ಎಲ್ಲಾ ಅಪಾದನೆಗಳಿಂದ ಮುಕ್ತಗೊಳಿಸಿದರು. ಆದಾಗ್ಯೂ, ಆಡಳಿತ ಮಂಡಳಿಯು/ವ್ಯವಸ್ಥಾಪನೆಯು ತನಿಖಾ ವರದಿಯನ್ನು ಒಪ್ಪಿಕೊಳ್ಳಲಿಲ್ಲ, ಬದಲಾಗಿ ವ್ಯವಸ್ಥಾಪಕ ನಿರ್ದೇಶಕರವರು

ತನಿಖೆಯ ಫಲಿತಾಂಶದ ಆಧಾರದ ಮೇರೆಗೆ ರೂ.1,95,700/–ರಷ್ಟು ಮೊತ್ತದ ವಸೂಲಾತಿಗಾಗಿ 24 ನವಂಬರ್ 2017ರಂದು ಒಂದು ಆದೇಶವನ್ನು ಜಾರಿಗೊಳಿಸಿದರು. ಆ ಮೊತ್ತವನ್ನು ಶ್ರೀ ಸುಂದರರಾಜ್ ಪಾವತಿಸಿದರು.

7. 2012–13 ಸಾಲಿನಲ್ಲಿ ಭೀಮೇಶ್ವರಿ ನೇಚರ್ ಕ್ಯಾಂಪಿನಲ್ಲಿ ನಿವಾಸಿ ವ್ಯವಸ್ಥಾಪಕರವರಿಂದ ರೂ.1,36,647/–ರಷ್ಟು ಮೊತ್ತದ ದುರುಪಯೋಗವಾಗಿದ್ದಿತು. ರೂ.1,36,647/–ರಷ್ಟು ಮೊತ್ತವನ್ನು ಅವರಿಂದ ವಸೂಲಾತಿ ಮಾಡಬೇಕಾಗಿದೆ. ಬೆಂಗಳೂರಿನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯದಲ್ಲಿ ಒಂದು ಪ್ರಕರಣವನ್ನು ದಾಖಲಿಸಲಾಗಿದೆ.

8.2012–13 ಮತ್ತು 2013–14 ಸಾಲುಗಳಲ್ಲಿ ಕಾರಾಪುರದ ಕಬಿನಿ ರಿವರ್ ಲಾಡ್ಜಿನಲ್ಲಿ ಅಕೌಂಟೆಂಟ್‌ರವರು ಅಂದಾಜು ಮಾಡಲಾದಂತೆ ರೂ.7,36,542/–ರಷ್ಟು ಮೊತ್ತವನ್ನು ದುರುಪಯೋಗ ಮಾಡಿಕೊಂಡಿದ್ದರು. ಆ ಮೊತ್ತವನ್ನು ಬಡ್ಡಿಯೊಂದಿಗೆ ಘಟಕದ ನಿವಾಸಿ ವ್ಯವಸ್ಥಾಪಕರವರು ಘಟಕದ ಒಟ್ಟಾರೆ ನಿಯಂತ್ರಣಕ್ಕೆ ಜವಾಬ್ದಾರರಾಗಿರುವುದರಿಂದ, ಅವರಿಂದ ವಸೂಲಾತಿ ಮಾಡಬೇಕಾಗಿದ್ದಿತು. 29.08.2016ರ ತನಿಖೆಯ ಮೂಲಕ ನಿವೃತ್ತ ಸವಿವರ ತನಿಖೆಯನ್ನು ನಡೆಸಿದ ನಂತರ ನಿವೃತ್ತ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾದೀಶರಿಂದ ದಿನಾಂಕ 08.02.2017ರ ಸವಿವರ ತನಿಖೆಯು ಪೂರ್ಣಗೊಂಡಂತ, ತನಿಖಾ ಅಧಿಕಾರಿಯವರು ತಮ್ಮ 28.08.2017ರ ವರದಿಯ ಮೂಲಕ ಶ್ರೀ ಕುನಾಲ್ ಶರ್ಮ, ನಿವಾಸಿ ವ್ಯವಸ್ಥಾಪಕರು, ಇವರನ್ನು ಎಲ್ಲಾ ಅಪಾದನೆಗಳಿಂದ ಮುಕ್ತಗೊಳಿಸಿದರು. ಆದಾಗ್ಯೂ, ಆಡಳಿತ ಮಂಡಳಿಯು/ವ್ಯವಸ್ಥಾಪನೆಯು ತನಿಖಾ ವರದಿಯನ್ನು ಒಪ್ಪಿಕೊಳ್ಳಲಿಲ್ಲ, ಬದಲಾಗಿ ವ್ಯವಸ್ಥಾಪಕ ನಿರ್ದೇಶಕರವರು ತನಿಖೆಯ ಫಲಿತಾಂಶದ ಆಧಾರದ ಮೇರೆಗೆ ರೂ.3,68,271/– ರಷ್ಟು ಮೊತ್ತದ ವಸೂಲಾತಿಗಾಗಿ 12 ಡಿಸೆಂಬರ್ 2017ರಂದು ಒಂದು ಆದೇಶವನ್ನು ಜಾರಿಗೊಳಿಸಿದರು. ಆ ಮೊತ್ತವನ್ನು ಶ್ರೀ ಕುನಾಲ್ ಶರ್ಮ ಪಾವತಿಸಿದರು.

ಅನುಬಂಧ – ಡಿ

ಕಂಪನಿಗಳ ಅಧಿನಿಯಮ, 2013ರ ಪರಿಚ್ಛೇದ 143(5)ರ ಅಡಿಯಲ್ಲಿನ ನಿರ್ದೇಶನಗಳು

1	ಕಂಪನಿಯು ನಿರುಪಾದಿಕ ಹಕ್ಕಿನ ಹಿಡುವಳಿ ಮತ್ತು ಗುತ್ತಿಗೆ ಹಿಡುವಳಿಗಳಿಗಾಗಿ ಸುಸ್ಪಷ್ಟವಾದಂತಹ ಹಕ್ಕು ಪತ್ರಗಳನ್ನು/ಗುತ್ತಿಗೆ ಕರಾರುಗಳನ್ನು ಹೊಂದಿರುವುದೆ. ಇಲ್ಲವಾದಲ್ಲಿ ಯಾವ ಕ್ಷೇತ್ರ/ಪ್ರದೇಶದಲ್ಲಿ ಸುಸ್ಪಷ್ಟವಾದಂತಹ ಹಕ್ಕು ಪತ್ರಗಳು/ಗುತ್ತಿಗೆ ಕರಾರು ಪತ್ರಗಳು ಇಲ್ಲ ಎಂಬುದನ್ನು ತಿಳಿಸುವುದು.	2005–06ರಲ್ಲಿ ಬಂಡೀಪುರದ ಸಮೀಪ ಸಿದ್ಧಯ್ಯನಪುರದಲ್ಲಿ ಕಂಪನಿಯು ರೂ.1,70,478/–ರಷ್ಟು ಮೊತ್ತದಲ್ಲಿ ಖರೀದಿಸಿದ ಭೂಮಿಯನ್ನು ಕಂಪನಿಯ ಪರವಾಗಿ ಅಂದಿನ ವ್ಯವಸ್ಥಾಪಕರ ಹೆಸರಿನಲ್ಲಿ ನೋಂದಣಿ ಮಾಡಿಸಲಾಗಿದೆ . ಉಲ್ಲೇಖಿಸಲಾಗಿರುವ ಆಸ್ತಿಯ ಹಕ್ಕುಪತ್ರವನ್ನು ಕಂಪನಿಯ ಹೆಸರಿಗೆ ಇನ್ನೂ ಮಾಡಿಸಬೇಕಾಗಿದೆ.
2	ಋಣಗಳು/ಸಾಲಗಳು, ಬಡ್ಡಿ ಇತ್ಯಾದಿಗಳನ್ನು ಮನ್ನಾ ಮಾಡಿರುವ/ದಾಖಲೆಗಳಿಂದ ತೆಗೆದುಹಾಕಿರುವ ಯಾವುದಾದರೂ ಪ್ರಕರಣಗಳು ಇದ್ದಲ್ಲಿ, ಅವುಗಳ ಬಗ್ಗೆ ವರದಿ ಸಲ್ಲಿಸಿ, ಅಂತಹ ಪ್ರಕರಣಗಳು ಇದ್ದಲ್ಲಿ, ಅವುಗಳಿಗೆ ಕಾರಣ ಹಾಗೂ ಅವುಗಳಲ್ಲಿ ಒಳಗೊಂಡಿರುವ ಮೊತ್ತವನ್ನು ತಿಳಿಸುವುದು.	**ನಮ್ಮ ಲೆಕ್ಕಪರಿಶೋಧನೆಯ ವೇಳೆಯಲ್ಲಿ ಅಂತಹ ಯಾವುದೇ ಪ್ರಕರಣಗಳನ್ನೂ ಗಮನಿಸಲಿಲ್ಲ.**

3	ಮೂರನೇ ತಂಡಗಳ ಜೊತೆ ಇರುವ ಸರಕು ದಾಸ್ತಾನುಗಳಿಗೆ ಹಾಗೂ ಸರ್ಕಾರದಿಂದ ಅಥವಾ ಇತರೆ ಪ್ರಾಧಿಕಾರಗಳಿಂದ ಉಡುಗೊರೆಯಾಗಿ ಸ್ವೀಕರಿಸಲಾದ ಆಸ್ತಿಗಳಿಗೆ ಸಮರ್ಪಕ ದಾಖಲೆಗಳನ್ನು ನಿರ್ವಹಿಸಲಾಗಿದೆಯೆ.	ಸರಕು ದಾಸ್ತಾನುಗಳು ಮೂರನೇ ತಂಡಗಳ ಜೊತೆ ಇರುವ ದೃಷ್ಟಾಂತಗಳು ಇರುವುದಿಲ್ಲ. ಕಂಪನಿಯು, ಲೆಕ್ಕಪರಿಶೋಧನೆಗೆ ಒಳಪಟ್ಟ ಅವಧಿಯಲ್ಲಿ ಸರ್ಕಾರದಿಂದ ಅಥವಾ ಇತರೆ ಪ್ರಾಧಿಕಾರಗಳಿಂದ ಉಡುಗೊರೆಯ ರೂಪದಲ್ಲಿ ಯಾವುದೇ ಆಸ್ತಿಗಳನ್ನು ಸ್ವೀಕರಿಸಿರುವುದಿಲ್ಲ.

ಕಂಪನಿಗೆ ನಿರ್ದಿಷ್ಟವಾಗಿ ಅನ್ವಯಿಸುವ ಹೆಚ್ಚುವರಿ ನಿರ್ದೇಶನಗಳು

(ಎ)	ಅನ್ವಯಗೊಳ್ಳುವ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಮಾನದಂಡಗಳ ಪ್ರಕಾರ ಸಲ್ಲಿಸಲಾಗಿರುವ ಹಣ ಬಳಕೆ ಪ್ರಮಾಣ ಪತ್ರಗಳ ಆಧಾರದ ಮೇರೆಗೆ ಪ್ರವಾಸೋದ್ಯಮ ಮೂಲಭೂತಸೌಕರ್ಯಗಳಿಗಾಗಿ ಸ್ವೀಕರಿಸಲಾದ ಅನುದಾನಗಳನ್ನು ಗುರಿಯಾಗಿಸಿಕೊಳ್ಳಲಾಗಿದ್ದ ಉದ್ದೇಶಗಳಿಗಾಗಿ ಬಳಸಿಕೊಳ್ಳಲ್ಪಟ್ಟಿರುವುದೆ ಹಾಗೂ ಅವುಗಳನ್ನು ಸಮರ್ಪಕವಾಗಿ ಲೆಕ್ಕ ಇಡಲಾಗಿರುವುದೆ.	1. ಹಣ ಬಳಕೆ ಪ್ರಮಾಣ ಪತ್ರಗಳ ಆಧಾರದ ಮೇರೆಗೆ ಪ್ರವಾಸೋದ್ಯಮ ಮೂಲಭೂತ ಸೌಕರ್ಯಗಳ ಅಭಿವೃದ್ಧಿಗಾಗಿ ಸ್ವೀಕರಿಸಲಾದ ಅನುದಾನಗಳನ್ನು ಗುರಿಯಾಗಿಸಿಕೊಳ್ಳಲಾಗಿದ್ದ ಉದ್ದೇಶಗಳಿಗಾಗಿ ಬಳಸಿಕೊಳ್ಳಲಾಗಿದೆ. 2. ಬಳಕೆಯಾಗದೇ ಇದ್ದಂತಹ ಅನುದಾನವನ್ನು ಪ್ರಸ್ತುತ ಹೊಣೆಗಾರಿಕೆಗಳಿಗೆ ಬದಲಾಗಿ ಮೀಸಲು ಮತ್ತು ಹೆಚ್ಚುವರಿ ಎಂದು ಬಹಿರಂಗಪಡಿಸಲಾಗಿದೆ. 3. ಬಳಕೆಯಾಗದೇ ಇದ್ದಂತಹ ಅನುದಾನಗಳ ಮೇಲೆ ಗಳಿಸಲಾದ ಬಡ್ಡಿಯನ್ನು ಕಾರ್ಯಾಚರಣೆಯೇತರ ಆದಾಯವನ್ನಾಗಿ ಪರಿಗಣಿಸಲಾಗಿದೆ, ಅದನ್ನು ನಮ್ಮ ಲೆಕ್ಕಪರಿಶೋಧನಾ ವರದಿಯ ಕಂಡಿಕೆ 4.1.4ರಲ್ಲಿ ತೋರಿಸಲಾಗಿರುವ ಷರತ್ತುಗಳಲ್ಲಿ ಹೇಳಲಾಗಿದೆ. 4. ರೂ.27,22,76,240/–ರಷ್ಟು (ರೂಪಾಯಿಗಳು ಇಪ್ಪತ್ತ ಏಳು ಕೋಟಿ ಇಪ್ಪತ್ತ ಎರಡು ಲಕ್ಷ ಎಪ್ಪತ್ತ ಆರು ಸಾವಿರ ಇನ್ನೂರ ನಲವತ್ತು ಮಾತ್ರ) ಮೊತ್ತದಷ್ಟು ಅನುದಾನಗಳು ಬಳಕೆಯಾಗದೇ ಉಳಿದಿರುತ್ತವೆ. ಈ ಮೊತ್ತದ ಪೈಕಿ ರೂ.12,23,40,499/–ರಷ್ಟು (ರೂಪಾಯಿಗಳು ಹನ್ನೆರಡು ಕೋಟಿ ಇಪ್ಪತ್ತ ಮೂರು ಲಕ್ಷ ನಲವತ್ತು ಸಾವಿರ ನಾಲ್ಕು ನೂರ ತೊಂಬತ್ತ ಒಂಬತ್ತು ಮಾತ್ರ) ಮೊತ್ತವನ್ನು ನಿಶ್ಚಿತ ಅವಧಿ ಠೇವಣಿಗಳಲ್ಲಿ ಕೂಡಿಡಲಾಗಿರುತ್ತದೆ.
(ಬಿ)	ಕಂಪನಿಯು, ಕೊಠಡಿಗಳಲ್ಲಿ ನೆಲೆಸಿರುವಿಕೆ, ಉತ್ಪನ್ನಗಳು, ಪ್ರಕ್ರಿಯೆಗಳು ಹಾಗೂ ಸೇವೆಗಳನ್ನು ಒಳಗೊಂಡಂತೆ ಪ್ರಮುಖ ಕಾರ್ಯಾಚರಣೆಗಳು/ಉದ್ಯೋಗಗಳ ವೆಚ್ಚಗಳನ್ನು ನಿಯತವಾಗಿ ಲೆಕ್ಕ ಹಾಕುತ್ತಿರುವುದೆ. ಇಲ್ಲವಾದಲ್ಲಿ ವಿಫಲತೆಯ ಬಗ್ಗೆ ವಿವರಿಸಿರಿ.	ಕಂಪನಿಯು ನಿಯತಕಾಲಿಕವಾಗಿ ಕೊಠಡಿಗಳಲ್ಲಿ ನೆಲೆಸಿರುವಿಕೆ, ಉತ್ಪನ್ನಗಳು, ಪ್ರಕ್ರಿಯೆಗಳು ಹಾಗೂ ಸೇವೆಗಳನ್ನು ಒಳಗೊಂಡಂತೆ ಪ್ರಮುಖ ಕಾರ್ಯಾಚರಣೆಗಳು/ಉದ್ಯೋಗಗಳ ವೆಚ್ಚಗಳನ್ನು ಲೆಕ್ಕ ಹಾಕುತ್ತಿರುವುದಾಗಿ ನಮಗೆ ಮಾಹಿತಿ ನೀಡಿದೆ.

(ಸಿ)	ರಿಯಾಯಿತಿಗಳನ್ನು ನೀಡುವಲ್ಲಿ ಅನುಸರಿಸುತ್ತಿರುವ ಮಾನದಂಡಗಳು ಯಾವುವು ಹಾಗೂ ಮಾಡಲಾದ ವೆಚ್ಚಗಳ ವಸೂಲಾತಿಯನ್ನು ಖಚಿತಪಡಿಸಿಕೊಳ್ಳುವಲ್ಲಿ ಪ್ರಯೋಜನದ ಲೆಕ್ಕಾಚಾರ ಅನುಪಾತದ ವಿಶ್ಲೇಷಣೆಯನ್ನು ಮಾಡಲಾಗಿದೆಯೆ? ಕಡಿಮೆ ಪ್ರಮಾಣದಲ್ಲಿ ಮಾಡಲಾಗಿರುವ ವಸೂಲಾತಿಗಳ ಪ್ರಕರಣಗಳಿಗೆ ಸಂಬಂಧಿಸಿದಂತೆ ಅಂತಹ ಕ್ಷೇತ್ರಗಳನ್ನು ಗುರುತಿಸುವುದು ಹಾಗೂ ಅಂತಹ ಕಡಿಮೆ ಪ್ರಮಾಣದ ವಸೂಲಾತಿಯ ಕಾರಣ ಭರಿಸಲಾದ ನಷ್ಟದ ಬಗ್ಗೆ ಟೀಕೆಟಿಪ್ಪಣಿ ಮಾಡುವುದು.	1. ಕಂಪನಿಯು ಎಲ್ಲಾ ಆನ್‌ಲೈನ್ ಕಾಯ್ದಿರಿಸುವಿಕೆಗೆ ಶೇಕಡಾ 5ರಷ್ಟು ರಿಯಾಯಿತಿಯನ್ನು ನೀಡುತ್ತದೆ. 2. ಸಾಮಾನ್ಯ ರಿಯಾಯಿತಿಯು 5% ರಿಂದ 20% ವರೆಗೆ ಇರುತ್ತದೆ. 3. ಸಾಮಾನ್ಯ ರಿಯಾಯಿತಿಗಳಲ್ಲದೆಯೇ, ಕಂಪನಿಯು ವ್ಯವಸ್ಥಾಪಕ ನಿರ್ದೇಶಕರವರ ನಿರ್ದಿಷ್ಟ ಅನುಮೋದನೆಯೊಂದಿಗೆ ಶೇಕಡಾ 20 ರಷ್ಟು ಹೆಚ್ಚುವರಿ ರಿಯಾಯಿತಿಗಳನ್ನು ನೀಡುತ್ತದೆ. 4. ಸಾಮಾನ್ಯ ರಿಯಾಯಿತಿ ಅಲ್ಲದೆಯೇ ಆಯ್ದ ಕೆಲವು ರೆಸಾರ್ಟುಗಳಲ್ಲಿ ಅಕಾಲಿಕ ತಿಂಗಳುಗಳಲ್ಲಿ/ಮಾಸಗಳಲ್ಲಿ ಶೇಕಡಾ 40 ರವರೆಗೂ ಹೆಚ್ಚುವರಿ ರಿಯಾಯಿತಿಗಳನ್ನು ನೀಡಲಾಗುತ್ತದೆ. 5. ಕೆಲವು ದೃಷ್ಟಾಂತಗಳನ್ನು ಪರೀಕ್ಷಾ–ಪರಿಶೀಲನೆ ಮಾಡಲಾಗಿ ವಿಶೇಷ ಅತಿಥಿಗಳಿಗೆ ವ್ಯವಸ್ಥಾಪಕ ನಿರ್ದೇಶಕರವರ ಅನುಮೋದನೆಯ ಆಧಾರದ ಮೇರೆಗೆ ಶೇಕಡಾ 40ಕ್ಕಿಂತಲೂ ಅಧಿಕ ದರದಲ್ಲಿ ರಿಯಾಯಿತಿಗಳನ್ನು ನೀಡಲಾಗಿರುವುದು ಕಂಡುಬಂದಿತು. 6. ಕಂಪನಿಯು ಯಾವುದೇ ವೆಚ್ಚ ಪ್ರಯೋಜನ ವಿಶ್ಲೇಷಣೆಯನ್ನು ಮಾಡಿರುವುದಿಲ್ಲ. 7. ಶಾಖೆಗಳ/ಘಟಕಗಳ ಲಾಭ ಅಥವಾ ನಷ್ಟದ ವಿಶ್ಲೇಷಣೆಯ ಅನುಪಸ್ಥಿತಿಯಲ್ಲಿ ವಸೂಲಾತಿಗಳನ್ನು ಕಡಿಮೆ ಪ್ರಮಾಣದಲ್ಲಿ ಮಾಡಿದ್ದಲ್ಲಿ, ಅವುಗಳ ಬಗ್ಗೆ ನಾವು ಯಾವುದೇ ಟೀಕೆಟಿಪ್ಪಣಿಗಳನ್ನು ಮಾಡಲು ಸಾಧ್ಯವಾಗುವುದಿಲ್ಲ.
ಡಿ	ಲೆಕ್ಕಪರಿಶೋಧನೆಗೆ ಒಳಪಟ್ಟ ಸಂಸ್ಥೆಯು ತನ್ನ ಕಾರ್ಯಾಚರಣೆಗಳನ್ನು ಅಥವಾ ಅವುಗಳ ಒಂದು ಭಾಗವನ್ನು ಗಣಕೀಕರಣಗೊಳಿಸಿದ್ದಲ್ಲಿ, ಕಂಪನಿಯ ಮೂಲಮಾಹಿತಿಯು ಎಷ್ಟರಮಟ್ಟಿಗೆ ವಿದ್ಯುನ್ಮಾನೀಯ ನಮೂನೆಯಲ್ಲಿದೆ, ಲೆಕ್ಕವನ್ನಿಡುವಿಕೆ, ಮಾರಾಟಗಳ ಸಿಬ್ಬಂದಿ ಮಾಹಿತಿ, ವೇತನ ಪಟ್ಟಿ, ದಾಸ್ತಾನು, ಇವೇ ಮುಂತಾದ ಯಾವ ಕ್ಷೇತ್ರವನ್ನು ಗಣಕೀಕರಣಗೊಳಿಸಲಾಗಿದೆ ಹಾಗೂ ಕಂಪನಿಯು ಮೂಲಮಾಹಿತಿ/	1. ಲೆಕ್ಕಪತ್ರಗಳ ನಿರ್ವಹಣೆಗಾಗಿ ಟ್ಯಾಲಿ ಪ್ಯಾಕೇಜನ್ನು ಅಳವಡಿಸಿಕೊಂಡಿದೆ. 2. ಕಾಯ್ದಿರಿಸಿರುವಿಕೆಗಳನ್ನು ಒಂದು ಪ್ರತ್ಯೇಕ ಇಂಜಿನ್ ಮೂಲಕ ನಿರ್ವಹಿಸಲಾಗುತ್ತಿದೆ. ವರಮಾನಗಳನ್ನು ಮಾಸಿಕ ಆಧಾರದ ಮೇರೆಗೆ ಕಾಯ್ದಿರಿಸುವ ಇಂಜಿನ್‌ನಿಂದ ಊಡಿಕೆ ಮಾಡಲಾಗುವುದು. 3. ಪ್ರವೇಶಗಳಿಂದ ಬರುವ ಆದಾಯವನ್ನು ಶಾಖೆಗಳ ಮಟ್ಟದಲ್ಲಿ ಲೆಕ್ಕ ಇಡಲಾಗುವುದು.

	ತಂತ್ರಾಂಶ/ಯಂತ್ರಾಂಶಗಳಿಗಾಗಿ ಸಮರ್ಪಕ ಭದ್ರತಾ ಕಾರ್ಯನೀತಿಯನ್ನು ರೂಪಿಸಿದೆಯೇ ಎಂಬುದರ ಬಗ್ಗೆ ನಿರ್ಧಾರಣೆ ಮಾಡುವುದು ಹಾಗೂ ವರದಿಯನ್ನು ನೀಡುವುದು.	4. ಒಳ–ಪ್ರವೇಶದಿಂದ ಬರುವ ಆದಾಯ ಹಾಗೂ ವೆಚ್ಚಗಳನ್ನು ಒಳಗೊಂಡಂತೆ ಶಾಖಾ ಮಟ್ಟದ ದೈನಂದಿನ ಕಾರ್ಯಾಚರಣೆಗಳನ್ನು ಶಾಖಾ ಮಟ್ಟದಲ್ಲಿ ಲೆಕ್ಕ ಇಡಲಾಗುವುದು. ನಿರ್ದಿಷ್ಟ ಶಾಖೆಗಳಿಗೆ ಸಂಬಂಧಿಸಿದ ಎಲ್ಲಾ ಆದಾಯ ಮತ್ತು ವೆಚ್ಚಗಳನ್ನು ಕೇಂದ್ರ ಕಚೇರಿಯಲ್ಲಿ ಅಳವಡಿಸಿಕೊಳ್ಳುವುದಕ್ಕಾಗಿ ಒಂದು ಏಕೈಕ ಮಾಸಿಕ ದಾಖಲೆಯನ್ನು ದಾಖಲಿಸಲಾಗುವುದು.

ಟಿ. ಶ್ರೀರಾಮ್, ಮೆಹ್ತಾ ಅಂಡ್ ತಡಿಮಲ್ಲ ಇವರುಗಳಿಗಾಗಿ
ಚಾರ್ಟರ್ಡ್ ಅಕೌಂಟೆಂಟ್ಸ್
ಸಂಸ್ಥೆಯ ನೋಂದಣಿ ಸಂಖ್ಯೆ 004064ಎಸ್

––ಸಹಿ ಮಾಡಲಾಗಿದೆ––
ಕವಿತಾ ಪಿ
ಪಾಲುದಾರರು
ಸದಸ್ಯತ್ವ ಸಂಖ್ಯೆ 217569

ಸ್ಥಳ : ಬೆಂಗಳೂರು
ದಿನಾಂಕ 29 ಅಕ್ಟೋಬರ್ 2018

ಜಂಗಲ್ ಲಾಡ್ಜಸ್ ಅಂಡ್ ರೆಸಾರ್ಟ್ಸ್ ಲಿಮಿಟೆಡ್

31 ಮಾರ್ಚ್ 2018ರಲ್ಲಿದ್ದಂತೆ ಆಸ್ತಿ ಮತ್ತು ಜವಾಬ್ದಾರಿ ತ:ಖ್ತೆ

	ಟಿಪ್ಪಣಿಗಳು	31 ಮಾರ್ಚ್ 2018 ರಲ್ಲಿದ್ದಂತೆ	31 ಮಾರ್ಚ್ 2017 ರಲ್ಲಿದ್ದಂತೆ
ಈಕ್ವಿಟಿ ಮತ್ತು ಜವಾಬ್ದಾರಿಗಳು		ರೂಪಾಯಿಗಳು	ರೂಪಾಯಿಗಳು
ಷೇರುದಾರರ ನಿಧಿಗಳು:			
ಷೇರು ಬಂಡವಾಳ	1	1,21,21,700	1,21,21,700
ಕಾದಿರಿಸಿರುವಿಕೆಗಳು ಮತ್ತು ಮಿಗುತಾಯಗಳು	2	92,99,46,601	86,68,42,686
		94,20,68,301	**87,89,64,386**
ಚಾಲ್ತಿಯದಲ್ಲದ ಜವಾಬ್ದಾರಿಗಳು			
ಮುಂದೂಡಲ್ಪಟ್ಟಿರುವ ತೆರಿಗೆ ಪಾವತಿ ಬಾಧ್ಯತೆಗಳು (ನಿವ್ವಳ)			
ಇತರೆ ದೀರ್ಘಾವಧಿ ಜವಾಬ್ದಾರಿಗಳು	3	49,06,706	40,53,029
ದೀರ್ಘಾವಧಿ ಅನುವುಗಳು	4	3,32,78,956	2,84,98,408
		3,81,85,662	**3,25,51,437**
ಚಾಲ್ತಿ ಜವಾಬ್ದಾರಿಗಳು			
ಅಲ್ಪಾವಧಿ ಸಾಲಗಳು			–
ವ್ಯಾಪಾರ ವ್ಯವಹಾರದಲ್ಲಿ ಪಾವತಿ ಮಾಡಬೇಕಾಗಿರುವುಗಳು	5	14,21,13,266	5,67,76,130
ಇತರೆ ಚಾಲ್ತಿ ಜವಾಬ್ದಾರಿಗಳು	6	4,20,01,644	3,80,67,156
ಅಲ್ಪಾವಧಿ ಅನುವುಗಳು	7	28,42,571	98,76,953
		186,957,482	**104,720,239**
ಒಟ್ಟು		**1,167,211,445**	**1,016,236,063**
ಆಸ್ತಿಗಳು			
ಚಾಲ್ತಿಯದಲ್ಲದ ಆಸ್ತಿಗಳು			
ಸ್ಥಿರಾಸ್ತಿಗಳು			
ಸ್ಪರ್ಶಾರ್ಹ/ಗೋಚರಿಸುವ ಆಸ್ತಿಗಳು	8	41,05,19,071	40,70,68,506
ಸ್ಪರ್ಶಿಸಲಾಗದ/ಗೋಚರವಾಗದ ಆಸ್ತಿಗಳು	8–ಎ	5,55,020	28,76,790
ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿ	8–ಬಿ	4,32,18,840	2,02,74,861
ಚಾಲ್ತಿಯದಲ್ಲದ ಹೂಡಿಕೆಗಳು	9	25,00,000	25,00,000
ಮುಂದೂಡಲ್ಪಟ್ಟಿರುವ ತೆರಿಗೆ ಆಸ್ತಿಗಳು (ನಿವ್ವಳ)		8,76,713	(12,54,716)
ದೀರ್ಘಾವಧಿ ಸಾಲಗಳು ಮತ್ತು ಮುಂಗಡಗಳು	10	3,19,47,383	2,23,83,663

	ಟಿಪ್ಪಣಿಗಳು	31 ಮಾರ್ಚ್ 2018 ರಲ್ಲಿದ್ದಂತೆ	31 ಮಾರ್ಚ್ 2017 ರಲ್ಲಿದ್ದಂತೆ
ವ್ಯಾಪಾರ/ವ್ಯವಹಾರಗಳಿಗೆ ಸಂಬಂಧಿಸಿದಂತೆ ಸ್ವೀಕರಿಸಬೇಕಾದವುಗಳು	12	2,43,978	56,37,740
		48,98,61,005	**45,94,86,844**
ಚಾಲ್ತಿ ಆಸ್ತಿಗಳು			
ಸರಕುಸಾಮಗ್ರಿ/ಪೀಠೋಪಕರಣಗಳು	11	79,11,541	61,37,760
ವ್ಯಾಪಾರ ವ್ಯವಹಾರದಲ್ಲಿ ಬರಬೇಕಾಗಿರುವುಗಳು	12	4,72,63,602	3,90,92,664
ನಗದು ಮತ್ತು ನಗದಿಗೆ ಸಮಾನವಾದವುಗಳು	13	55,81,52,008	44,62,55,080
ಅಲ್ಪಾವಧಿ ಸಾಲಗಳು ಮತ್ತು ಮುಂಗಡಗಳು	14	3,42,28,454	2,52,44,359
ಇತರೆ ಚಾಲ್ತಿ ಆಸ್ತಿಗಳು	15	2,97,94,835	4,00,19,355
		67,73,50,440	**55,67,49,218**
ಒಟ್ಟು		**1,16,72,11,445**	**1,01,62,36,062**

ಲೆಕ್ಕಪತ್ರಗಳ ತಯಾರಿಕೆಗೆ ಸಂಬಂಧಿಸಿದ ಮಹತ್ವಪೂರ್ಣ ಧೋರಣೆಗಳ ಸಾರಾಂಶ
ಈ ತ:ಖ್ತೆಯ ಜೊತೆಯಲ್ಲಿರುವ ಟಿಪ್ಪಣಿಗಳು ಹಣಕಾಸು ತ:ಖ್ತೆಯ ಅವಿಭಾಜ್ಯ ಅಂಗವಾಗಿವೆ.

ನಮ್ಮ ಅದೇ ದಿನಾಂಕದ ವರದಿಯ ಪ್ರಕಾರ

ಟಿ. ಶ್ರೀರಾಮ್, ಮೆಹ್ತ ಅಂಡ್ ತಡಿಮಲ್ಲ
ಚಾರ್ಟರ್ಡ್ ಅಕೌಂಟೆಂಟ್‌ಗಳು
ಸಂಸ್ಥೆಯ ನೋಂದಣಿ ಸಂಖ್ಯೆ 004064ಎಸ್

ನಿರ್ದೇಶಕರುಗಳ ಮಂಡಳಿಗಾಗಿ ಮತ್ತು ಅದರ ಪರವಾಗಿ
ಜಂಗಲ್ ಲಾಡ್ಜಸ್ ಅಂಡ್ ರೆಸಾರ್ಟ್ಸ್

ಸಹಿ ಮಾಡಲಾಗಿದೆ ----------ಸಹಿ ಮಾಡಲಾಗಿದೆ----------

ಕವಿತಾ ಪಿ	ವಿಜಯ್ ಶರ್ಮ	ಟಿ.ಕೆ. ಅನಿಲ್ ಕುಮಾರ್
ಪಾಲುದಾರರು	ವ್ಯವಸ್ಥಾಪಕ ನಿರ್ದೇಶಕರು	ನಿರ್ದೇಶಕರು
ಸದಸ್ಯತ್ವ ಸಂಖ್ಯೆ 217569	ಡಿಐಎನ್ 07096296	ಡಿಐಎನ್ 06704577

ಸ್ಥಳ: ಬೆಂಗಳೂರು
ದಿನಾಂಕ 29.10.2018

ಜಂಗಲ್ ಲಾಡ್ಜಸ್ ಅಂಡ್ ರೆಸಾರ್ಟ್ಸ್ ಲಿಮಿಟೆಡ್

31 ಮಾರ್ಚ್ 2018ಕ್ಕೆ ಅಂತ್ಯಗೊಂಡ ವರ್ಷಕ್ಕೆ ಲಾಭ ಮತ್ತು ನಷ್ಟ ತ:ಖ್ತೆ

	ಟಿಪ್ಪಣಿಗಳು	31 ಮಾರ್ಚ್ 2018ಕ್ಕೆ ಅಂತ್ಯಗೊಂಡ ವರ್ಷಕ್ಕೆ	31 ಮಾರ್ಚ್ 2017ಕ್ಕೆ ಅಂತ್ಯಗೊಂಡ ವರ್ಷಕ್ಕೆ
		ರೂಪಾಯಿಗಳು	ರೂಪಾಯಿಗಳು
ವ್ಯಾಪಾರ ವ್ಯವಹಾರ ಕಾರ್ಯಾಚರಣೆಗಳಿಂದ ಆದಾಯ (ಒಟ್ಟು)	17	51,51,65,821	50,13,63,795
ಇತರೆ ಆದಾಯ	18	4,65,08,895	3,46,34,178
ಒಟ್ಟಾರೆ ಆದಾಯ		**56,16,74,716**	**53,59,97,974**
ವೆಚ್ಚಗಳು			
ವ್ಯಾಪಾರದಲ್ಲಿನ ದಾಸ್ತಾನುಗಳ ಖರೀದಿ	19	5,06,71,571	4,51,29,747
ಸರಕುಗಳಲ್ಲಿನ (ಹೆಚ್ಚಳ)/ಇಳಿಕೆ	20	(17,73,781)	14,66,023
ನೌಕರರ ಸೌಲಭ್ಯಗಳಿಗಾಗಿ ವೆಚ್ಚಗಳು	21	17,58,52,990	16,41,00,047
ಸವಕಳಿ	22	3,01,26,022	2,46,65,907
ಆಸ್ತಿಯ ಮೂಲಬೆಲೆಯನ್ನು ಕ್ರಮೇಣ ಕಳೆಯುವಿಕೆಗೆ ಸಂಬಂಧಿತ (ಅಮಾರ್ಟಿಸೇಷನ್) ವೆಚ್ಚಗಳು	22	22,41,901	22,41,916
ಇತರೆ ವೆಚ್ಚಗಳು	23	20,66,41,593	19,78,06,129
ಒಟ್ಟು ವೆಚ್ಚಗಳು		**46,37,60,296**	**43,54,09,769**
ವಿಶೇಷ ಸಾಮಗ್ರಿಗಳ ಖರೀದಿಗಳು ಹಾಗೂ ತೆರಿಗೆ ಪಾವತಿಗೆ ಮುನ್ನ ಲಾಭ/(ನಷ್ಟ)		9,79,14,420	10,05,88,205
